ಆಡಳಿತ ತರಬೇತಿ ಸಂಸ್ಥೆಯ ಮಾಸಿಕ ವಾರ್ತಾಪತ್ರ

# ಪರಿವರ್ತನೆಗಾಗಿ ಪ್ರಶಿಕ್ಷಣ

ಸಂಪುಟ2 ಸಂಚಿಕೆ1 ನವೆಂಬರ್, 2007 ಉಚಿತ ಆಂತರಿಕ ಪ್ರಸಾರಕ್ಕಾಗಿ



## ಸುಸ್ಥಿರ ನಗರ ಜೀವನಾವಕಾಶ

### ದಕ್ಷಿಣ ಭಾರತ ಮಟ್ಟದ ಕಾರ್ಯಾಗಾರ

ಅಂತರಂಗ

ನಮ್ಮ ಆಡಳಿತ 2
ಸಂಪಾದಕೀಯ 3
ಪರಸ್ಪರ 3
ನಮ್ಮ ನಗರ 4
ನಮ್ಮ ಗ್ರಾಮ 5

'ಮಾಸ'ದ ಮಾತು

ನೀವು ನಿಜವಾಗಿಯೂ ಕಣ್ಣು ತೆರೆದರೆ, ಪ್ರತಿಯೊಬ್ಬರಲ್ಲಿಯೂ ನಿಮ್ಮನ್ನೇ ಕಾಣುತ್ತೀರಿ: ನೀವು ನಿಜವಾಗಿಯೂ ಕಿವಿ ತೆರೆದು ಕೇಳಿದರೆ ಎಲ್ಲಾ ಧ್ವನಿಗಳಲ್ಲಿ ನಿಮ್ಮ ಧ್ವನಿಯನ್ನೇ ಕೇಳುತ್ತೀರಿ

- ಖಲೀಲ್ ಗಿಬ್ರಾನ್

# ಜಿಲ್ಲಾ ಯೋಜನಾ ಸಮಿತಿಗಳು : ಒಂದು ಅವಲೋಕನ

ವಿಕೇಂದ್ರೀಕೃತ ವ್ಯವಸ್ಥೆಯ ಬಹು ಮುಖ್ಯ ಅಂಶ ಅಧಿಕಾರವನ್ನು ಆಯಾ ಸ್ತರದ ಸಂಸ್ಥೆಗಳಿಗೇ ವರ್ಗಾಯಿಸುವುದು. ಇದರಲ್ಲಿ ಯೋಜನೆಯೂ ಕೂಡ ಪ್ರಮುಖ ಪಾತ್ರವನ್ನು ವಹಿಸುತ್ತದೆ. ತಮ್ಮ ಜಿಲ್ಲೆಯ ಯೋಜನೆಯನ್ನು ತಾವೇ ರೂಪಿಸಿಕೊಳ್ಳಬಲ್ಲೆವು ಎನ್ನುವ ವಿಶ್ವಾಸ ಮೂಡಿದಾಗ ವಿಕೇಂದ್ರೀಕರಣ ಯಶಸ್ವಿ ಪಥದಲ್ಲಿದೆ ಎನ್ನಬಹುದು. ಇಲ್ಲವಾದಲ್ಲಿ ಯೋಜನಕಾರರು ರಾಜಧಾನಿಗಳಲ್ಲಿ ಕುಳಿತು ರಾಜ್ಯದ ಗಡಿ ಭಾಗಗಳಿಗೆ ಯೋಜನೆ ರೂಪಿಸಿ ಅನುಷ್ಠಾನಗೊಳಿಸುತ್ತೇವೆಂದರೆ ಈಗಿನ ನಮ್ಮ ಗಡಿಭಾಗದ ಜಿಲ್ಲೆಗಳ ಸ್ಥಿತಿ ಉಳಿದ ಜಿಲ್ಲೆಗಳಿಗೂ ವಿಸ್ತರಣೆಯಾಗುವುದರಲ್ಲಿ ಸಂಶಯವಿಲ್ಲ.

ಈ ಅಪಾಯವನ್ನು ಗಮನಿಸಿಯೇ ರಾಜ್ಯ ಸರ್ಕಾರ ದಿನಾಂಕ 17.02.2000ದಲ್ಲಿ ಆದೇಶ ಹೊರಡಿಸಿ ಎಲ್ಲಾ ಜಿಲ್ಲೆಗಳಿಗೂ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಿ ಅವುಗಳ ಮಾರ್ಗದರ್ಶನಾನುಸಾರ ಕಾರ್ಯನಿರ್ವಹಿಸುವಂತೆ ಸೂಚಿಸಿತು. ಸರ್ಕಾರದ ಈ ಘನ ಉದ್ದೇಶವನ್ನು ಜನರ ಜೀವನ ಸ್ಥಿತಿಯಲ್ಲಿ ಸುಧಾರಣೆ ಸಾಧ್ಯವಾಗಬಹುದಿತ್ತು. ಆದರೆ ಈ ಸಮಿತಿಗಳು ರಚನೆಗೊಂಡವೇ? ರಚಿತವಾಗಿದ್ದರೆ ಯಾವ ರೀತಿ ಕಾರ್ಯನಿರ್ವಹಿಸುತ್ತಿವೆ ಎಂಬ ಬಗ್ಗೆ ನಿಖರವಾದ ಚಿತ್ರಣ ಪಡೆಯಲು ಆಡಳಿತ ತರಬೇತಿ ಸಂಸ್ಥೆಯ ಬೋಧಕರಾದ ಶ್ರೀ ಅಶೋಕ್ ಸಂಗನಾಳ್ ಜುಲೈ 2006ರಲ್ಲಿ ಕೈಗೊಂಡ ಅಧ್ಯಯನ ಬೆಳಕು ಚೆಲ್ಲುತ್ತದೆ.

ಈ ಅಧ್ಯಯನಕ್ಕಾಗಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿತ್ತು. ಅಧ್ಯಯನದಲ್ಲಿ ಜಿಲ್ಲಾ ಯೋಜನಾ ಸಮಿತಿಗಳ ರಚನೆ, ಅವುಗಳ ಕಾರ್ಯ, ವಿಷಯ ವ್ಯಾಪ್ತಿ ಹಾಗೂ ಕೈಗೊಂಡ ಯೋಜನಾ ಕಾರ್ಯಗಳೇನು ಎಂದು ತಿಳಿಯುವುದು ಮುಖ್ಯ ಉದ್ದೇಶವಾಗಿತ್ತು.

ಸರ್ಕಾರದ ಆದೇಶಾನುಸಾರ ಎರಡೂ ಜಿಲ್ಲೆಗಳಲ್ಲಿ 2002ರೊಳಗೆ ಸಮಿತಿಗಳ ರಚನೆಯಾಗಿದೆಯಾದರೂ 2006ರ ವರೆಗೆ

**ನಮ್ಮ ಆಡಳಿತ**

ನಡೆದಿರುವುದು ಮೂರು ಮತ್ತು ನಾಲ್ಕು ಸಭೆಗಳು ಮಾತ್ರ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ವಾರ್ಷಿಕ ಅಂದಾಜುಗಳನ್ನು ಅನುಮೋದಿಸಿರುವುದನ್ನು ಬಿಟ್ಟರೆ ಹೇಳಿಕೊಳ್ಳುವಂತಹಾ ಯೋಜನಾ ಚಟುವಟಿಕೆಗಳನ್ನು ನಡೆಸಿಲ್ಲ.

ಮೈಸೂರಿನಲ್ಲಿ ಮಾತ್ರ 2005-06ರಲ್ಲಿ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ರಚನೆ ಮಾಡಬೇಕಾದ ಪ್ರಮೇಯ ಏಳು ಉಪ ಸಮಿತಿಗಳ ರಚನೆಯಾಗಿದೆ. ಈ ಸಮಿತಿಗಳ ಸಾಮರ್ಥ್ಯ ಮತ್ತು ಕಾರ್ಯವೈಖರಿಯನ್ನು ತಿಳಿಯಲು ಏಳು ಮಾನದಂಡಗಳನ್ನು ಅಳವಡಿಸಿ ಮಾಡಿದ ಅಧ್ಯಯನದಲ್ಲಿ ಕಂಡುಬಂದ ಅಂಶಗಳನ್ನು ಕೋಷ್ಟಕದಲ್ಲಿ ಕೊಡಲಾಗಿದೆ.

ಕೋಷ್ಟಕದಲ್ಲಿ ನೀಡಲಾದ ಅಂಶಗಳನ್ನು ಅವಲೋಕಿಸಿದರೆ ಶೇಕಡಾ 65-70ರಷ್ಟು ಸದಸ್ಯರಿಗೆ ಜಿಲ್ಲಾ ಯೋಜನಾ ಸಮಿತಿಗಳ ಪರಿಚಯವೇ ಇಲ್ಲ. ಅಂದ ಮೇಲೆ ಈ ಸಮಿತಿಯಿಂದ ಹೆಚ್ಚಿನ ನಿರೀಕ್ಷೆ ಇಟ್ಟುಕೊಳ್ಳುವ ಅಗತ್ಯವಿಲ್ಲ. ಜಿಲ್ಲೆಯ ಸಮಗ್ರ ಅಭಿವೃದ್ಧಿ ಚಿಂತನೆ ನಡೆಸಿ ಸಮತೂಕದ ಬೆಳವಣಿಗೆಗೆ ಕಾರಣವಾಗಬಹುದಿದ್ದ ಜಿಲ್ಲಾ ಯೋಜನೆ ಪರಿಕಲ್ಪನೆಗೆ ಆರಂಭದಲ್ಲಿಯೇ ನಿರಾಶಾದಾಯಕ ಬೆಂಬಲ. ಇನ್ನು ದೀರ್ಘಕಾಲೀನ ಯೋಜನೆಗಳನ್ನು ಈ ಸಮಿತಿಗಳು ಕೈಗೊಳ್ಳುವುದೆಂತು? ನಾವು ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ ಪ್ರಾಂತೀಯ ಅಸಮತೋಲನ ನಿರ್ಮೂಲನೆಯಾದರೂ ಹೇಗೆ ಸಾಧ್ಯ? ಜಿಲ್ಲಾ ಸಮಿತಿಗಳು ಸರ್ಕಾರದ ಉದ್ದೇಶದೊಂದಿಗೆ ಇನ್ನಾದರೂ ಕಾರ್ಯರಂಭ ಮಾಡಬಲ್ಲವೆ?

ಇತ್ತೀಚೆಗೆ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ರಚನೆಯಾಗುತ್ತಿದ್ದು, ಇವುಗಳು ಈ ನಿಟ್ಟಿನಲ್ಲಿ ಅನುಸರಿಸಬೇಕಾದ ಸರಿಯಾದ ಮಾರ್ಗ ತೋರಬಹುದೇ? ನಿರೀಕ್ಷೆ ಮಾಡೋಣ.

(ಆಧಾರ: ಜಿಲ್ಲಾ ಯೋಜನಾ ಸಮಿತಿಗಳ ಕಾರ್ಯ: ಒಂದು ತುಲನಾತ್ಮಕ ಅಧ್ಯಯನ- ಅಶೋಕ್ ಸಂಗನಾಳ್)

- ಎಚ್. ಪಿ. ಶಿವಶಂಕರ್, ಬೋಧಕರು,
ಆಡಳಿತ ತರಬೇತಿ ಸಂಸ್ಥೆ.

## ಸಾಮರ್ಥ್ಯ ಮತ್ತು ಕಾರ್ಯವೈಖರಿ

| ವಿಷಯ | ಅತೀ ಹೆಚ್ಚು | ಸಾಧಾರಣ | ಗೊತ್ತಿಲ್ಲ | ಇಲ್ಲವೇ ಇಲ್ಲ | ಒಟ್ಟು |
|---|---|---|---|---|---|
| 1. ದೂರದೃಷ್ಟಿತ್ವ | 20% | 33% | 20% | 27 | 100 |
| 2. ಜವಾಬ್ದಾರಿ ಮತ್ತು ವಹಿಸಬೇಕಾದ ಪಾತ್ರ | 40% | 48% | 6% | 65 | 100 |
| 3. ಅಧಿಕಾರವಿದೆ- ಭಾವನೆ | 0% | 20% | 27% | 53% | 100 |
| 4. ಸಂಪನ್ಮೂಲ- ಸಮರ್ಪಕ: | 5% | 67% | 6% | 27% | 100 |
| 5. ಯೋಜನಾ ಪರಿಣತಿ: | 0% | 33% | 40% | 27% | 100 |
| 6. ಸಂಪನ್ಮೂಲ ಕ್ರೋಢೀಕರಣ: | 6% | 20% | 26% | 46% | 100 |
| 7. ಸಂಪನ್ಮೂಲ ಕ್ರೋಢೀಕರಣದ ಪ್ರಭಾವ: | 0% | 26% | 20% | 54% | 100 |

### ಲೇಖಕರಿಗೆ ಸೂಚನೆ

'ಪರಿವರ್ತನೆಗಾಗಿ ಪ್ರಶಿಕ್ಷಣ' ಮಾಸಿಕಕ್ಕೆ ಓದುಗರು ಕೂಡ ಬರೆಯಬಹುದು. ಆಡಳಿತ ಮತ್ತು ತರಬೇತಿ ಕ್ಷೇತ್ರದಲ್ಲಿ ತಮ್ಮ ಅನುಭವ ಮತ್ತು ವಿಚಾರಗಳಿಗೆ ಸ್ವಾಗತ. ಬರಹಗಳು ಚುಟುಕಾಗಿದ್ದು, ವಿಷಯಕ್ಕೆ ಸೀಮಿತವಾಗಿರಬೇಕು. ಆಡಳಿತ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಸಾವಿರಾರು ಓದುಗರಿಗೆ ತಮ್ಮ ವಿಚಾರಗಳನ್ನು ಮುಟ್ಟಿಸಲು ಇದೊಂದು ಉತ್ತಮ ವೇದಿಕೆ. ತಡವೇಕೆ, ತಕ್ಷಣ ಲೇಖನಿ ಕೈಗೆತ್ತಿಕೊಳ್ಳಿ!

-ಸಂ.

ಒಬ್ಬ ವ್ಯಕ್ತಿಯ ವಾಸ್ತವಿಕತೆ ಅವನು ನಿಮಗೆ ಏನು ತಿಳಿಸುತ್ತಾನೋ ಅದರಲ್ಲಿಲ್ಲ; ಏನನ್ನು ತಿಳಿಸಲು ಸಾಧ್ಯವಿಲ್ಲವೋ ಅದರಲ್ಲಿದೆ

- ಖಲೀಲ್ ಗಿಬ್ರಾನ್

# ಎರಡನೇ ವರ್ಷದಲ್ಲಿ 'ಪರಿವರ್ತನೆಗಾಗಿ ಪ್ರಶಿಕ್ಷಣ'

## ಸಂಪಾದಕೀಯ

ಆಡಳಿತ ತರಬೇತಿ ಸಂಸ್ಥೆಯು 'ಪರಿವರ್ತನೆಗಾಗಿ ಪ್ರಶಿಕ್ಷಣ' ಪತ್ರಿಕೆಯು ಒಂದು ವರ್ಷವನ್ನು ಯಶಸ್ವಿಯಾಗಿ ಪೂರೈಸಿ ಎರಡನೇ ವರ್ಷಕ್ಕೆ ಕಾಲಿಡುತ್ತಿದೆ. ನಿಮಗೆ ತಿಳಿದಿರುವಂತೆ ಆಡಳಿತ ತರಬೇತಿ ಸಂಸ್ಥೆಯು ಆಡಳಿತಾತ್ಮಕ ವಿಷಯಗಳಲ್ಲಿ ಆಳವಾದ ತರಬೇತಿಯನ್ನು ನೀಡುವ ದೇಶದ ಪ್ರಮುಖ ಸಂಸ್ಥೆಯಾಗಿದ್ದು, ಸಹೋದರಿ ಸಂಸ್ಥೆಗಳಾದ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮತ್ತು ರಾಜ್ಯ ನಗರಾಭಿವೃದ್ಧಿ ಸಂಸ್ಥೆಗಳ ಜೊತೆ ಜೊತೆಯಾಗಿ ರಾಜ್ಯದಲ್ಲಿ ಆಡಳಿತದ ಗುಣಮಟ್ಟವನ್ನು ಸುಧಾರಿಸುವುದರ ಜೊತೆಗೆ ಪ್ರಜಾ ಪ್ರಭುತ್ವವನ್ನು ಬಲಪಡಿಸುವ ನಿರಂತರ ಕಾಯಕದಲ್ಲಿ ನಿರತವಾಗಿದೆ.

ಈ ಸಂಸ್ಥೆಗಳು ಅಧಿಕಾರಿ ವರ್ಗ ಮತ್ತು ವಿವಿಧ ಇಲಾಖೆಗಳ ಸಿಬ್ಬಂದಿಗಳಿಗೆ ಮಾತ್ರವಲ್ಲದೇ ಚುನಾಯಿತ ಪ್ರತಿನಿಧಿಗಳಿಗೂ ಆಡಳಿತ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ ವ್ಯಾಪಕ ವಿಷಯಗಳ ಕುರಿತು ತರಬೇತಿ ನೀಡುತ್ತಿದೆ. ಪ್ರಜಾಪ್ರಭುತ್ವ ಮತ್ತು ಉತ್ತಮ ಆಡಳಿತವು ಏಕಾಏಕಿಯಾಗಿ ಒಮ್ಮೆಗೆ ಬೆಳೆದುಬರುವ ವಿಷಯವಲ್ಲ. ಅದು ನಿರಂತರವಾಗಿ ಬೆಳೆಯುತ್ತಾ ಬರುವ ಪ್ರಕ್ರಿಯೆ. ವಿಕೇಂದ್ರೀಕರಣವು ಈ ಪ್ರಕ್ರಿಯೆಯ ಒಂದು ಪರಿಣಾಮವೇ ಆಗಿದೆ.

ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವವನ್ನು ಬಲಗೊಳಿಸುವ ನಿಟ್ಟಿನಲ್ಲಿ ಆಡಳಿತದ ಪರಿಕಲ್ಪನೆಯಲ್ಲಿ ನಿರಂತರ ಬದಲಾವಣೆಗಳು ಆಗುತ್ತಾ ಬರುತ್ತಿವೆ. ಆಡಳಿತ ಸುಧಾರಣೆ, ವಿದ್ಯುನ್ಮಾನ ಆಡಳಿತ, ಆಡಳಿತದಲ್ಲಿ ಪಾರದರ್ಶಕತೆ, ಜನರತ್ತ ಆಡಳಿತ, ಜನಯೋಜನೆ, ಜನರಿಗೆ ಆಡಳಿತದ ಎಲ್ಲಾ ವಿಷಯಗಳ ಕುರಿತು ಮಾಹಿತಿ ನೀಡಿಕೆ ಇತ್ಯಾದಿ ಮಾತುಗಳು ಇತ್ತೀಚೆಗೆ ಹೆಚ್ಚುಹೆಚ್ಚಾಗಿ ಕೇಳಿಬರುತ್ತಿವೆ. ಇಂತಹಾ ಒಂದು ಸನ್ನಿವೇಶದಲ್ಲಿ ನಿರಂತರ ತರಬೇತಿ ಅನಿವಾರ್ಯ. ಇಲ್ಲವಾದರೆ ಆಡಳಿತವು ನಿಂತ ನೀರಾಗುತ್ತದೆ.

ಈ ಮೂರೂ ಸಂಸ್ಥೆಗಳ ಕಾರ್ಯ ಚಟುವಟಿಕೆಗಳು ಹಾಗೂ ಆಡಳಿತಕ್ಕೆ ಸಂಬಂಧಿಸಿದ ಬೇರೆ ಬೇರೆ ವಿಷಯಗಳು ಹೆಚ್ಚಿನ ಸಂಖ್ಯೆಯ ಅಧಿಕಾರಿ ವರ್ಗ ಮತ್ತು ಸಿಬ್ಬಂದಿಗಳಿಗೆ ತಿಳಿಯಬೇಕು. ಅವರೊಂದಿಗೆ ಹೆಚ್ಚಿನ ಸಂವಾದ ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಈ ಪತ್ರಿಕೆಯನ್ನು ಆರಂಭಿಸಲಾಗಿದೆ. ಎರಡನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಪತ್ರಿಕೆಯನ್ನು ಇನ್ನಷ್ಟು ಸುಧಾರಿಸುವ ಉದ್ದೇಶ ಇರಿಸಿಕೊಂಡಿದ್ದೇವೆ. ಇದಕ್ಕೆ ತಮ್ಮೆಲ್ಲರ ಸಹಕಾರವನ್ನು ಕೋರುತ್ತಾ, ನಿಮ್ಮ ಸಲಹೆ ಸೂಚನೆಗಳನ್ನು ಸ್ವಾಗತಿಸುತ್ತೇವೆ.

- ಸಂಪಾದಕ.


ಸಂಪಾದಕೀಯ ಬಳಗ

ಪ್ರಧಾನ ಸಂಪಾದಕರು
ಶ್ರೀ ಸಿ.ಎಸ್.ಸುರಂಜನ, ಭಾ.ಆ.ಸೇ.
ಮಹಾ ನಿರ್ದೇಶಕರು

ಗೌರವ ಸಂಪಾದಕರು
ಡಾ. ನಿರಂಜನ ವಾನಳ್ಳಿ

ಸಂಪಾದಕರು
ಶ್ರೀ ನಿಖಿಲ್ ಕೋಲ್ಪೆ

ಸಹ ಸಂಪಾದಕರು
ಶ್ರೀ ಹೆಚ್.ಪಿ. ಶಿವಶಂಕರ್, ಬೋಧಕರು, ಆ.ತ.ಸಂ.
ಶ್ರೀ ಬಿ. ಯೋಗನಾಥ್ ಸಿಂಗ್, ಬೋಧಕರು, ರಾ.ನ.ಸಂ
ಶ್ರೀ ವಿಲ್‌ಫ್ರೆಡ್ ಡಿಸೋಜ, ಸಲಹೆಗಾರರು, ಅ.ನ.ಸಾ.ರಾ.ಗ್ರಾ.ಸಂ.

ಸಂಪಾದಕೀಯ ಸಲಹಾ ಮಂಡಳಿ
ಶ್ರೀ ಹೆಚ್.ಎಸ್. ಅಶೋಕಾನಂದ, ಕ.ಆ.ಸೇ. ನಿರ್ದೇಶಕರು, ಅ.ನ.ಸಾ.ರಾ.ಗ್ರಾ.ಸಂ.
ಶ್ರೀ ಕೆ.ಆರ್. ಜಯಪ್ರಕಾಶ್ ರಾವ್, ಕ.ಆ.ಸೇ. ನಿರ್ದೇಶಕರು, ರಾ.ನ.ಸಂ.
ಶ್ರೀ ಆರ್.ಎಸ್.ರಾಜಗೋಪಾಲರಾವ್, ಕ.ಆ.ಸೇ. ಜಂಟಿ ನಿರ್ದೇಶಕರು (ತ). ಆ.ತ.ಸಂ.
ಶ್ರೀ ಕೆ. ಇಕ್ಬಾಲ್ ಹುಸೇನ್, ಕ.ಆ.ಸೇ. ಜಂಟಿ ನಿರ್ದೇಶಕರು (ಆ). ಆ.ತ.ಸಂ.
ಡಾ. ಸೈಯದ್ ಅಜ್ಮಲ್ ಪಾಷಾ, ಬೋಧಕರು, ಆ.ತ.ಸಂ.

ವಿಳಾಸ
ಆಡಳಿತ ತರಬೇತಿ ಸಂಸ್ಥೆ
ಲಲಿತಮಹಲ್ ರಸ್ತೆ, ಮೈಸೂರು.
ಇಮೇಲ್ : parivartha@yahoo.co.in


# ರೈತರ ಬೆಳೆಗಳಿಗೆ ಮಾರುಕಟ್ಟೆ ಒದಗಿಸುವುದು ಅತ್ಯಗತ್ಯ

## ಪರಸ್ಪರ

ಪ್ರಿಯರೇ,

ಇತ್ತೀಚೆಗೆ ಅಧ್ಯಯನವೊಂದರ ಸಲುವಾಗಿ ಬಾಗಲಕೋಟೆ ಜಿಲ್ಲೆಗೆ ಹೋಗಿದ್ದಾಗ ಒಂದು ದಿನ ಬೆಳಗ್ಗೆ ಜಮಖಂಡಿಯತ್ತ ಪ್ರಯಾಣ ಬೆಳೆಸಿದೆವು. ದಾರಿಯಲ್ಲಿ ಕಲಾತಗಿ ಎಂಬ ಒಂದು ಊರು ಸಿಗುತ್ತದೆ. ಅಲ್ಲಿ ಬಸ್ಸು ನಿಲ್ಲುವ ಜಾಗದಲ್ಲಿ ನೋಡುತ್ತೇವೆ, ಎಲ್ಲಿ ನೋಡಿದರಲ್ಲಿ, ಬೇರೆ ಬೇರೆ ಬಣ್ಣ, ಗಾತ್ರಗಳ ದಾಳಿಂಬೆ ಮಾರುವ ಅಂಗಡಿಗಳು ತುಂಬಿ ಹೋಗಿದ್ದವು.

ಮಹಿಳೆಯರು, ವೃದ್ಧರು ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಬುಟ್ಟಿಹೊತ್ತುಕೊಂಡು ಬೇರೆ ಬೇರೆ ಜಾತಿಯ ದಾಳಿಂಬೆ ಹಣ್ಣುಗಳನ್ನು ಮಾರುತ್ತಿದ್ದರು. ನಾವು ಹೊರಗಿನವರೆಂದು ಗೊತ್ತಾಗಿ ಚೌಕಾಶಿ ಮಾಡಿದರೂ, ನಂತರ ಅವರಲ್ಲಿ ಸ್ಪರ್ಧೆ ಎಷ್ಟಿತ್ತೆಂದರೆ ಕೊನೆಗೆ ಹತ್ತು ರೂಪಾಯಿಗೆ ಹತ್ತು ದಾಳಿಂಬೆ ಕೊಡಲು ಸಿದ್ಧರಾದರು. ದಾಳಿಂಬೆ ಹಣ್ಣುಗಳನ್ನು ಯಾವಗಲೋ ಒಮ್ಮೆ ಮಾರುಕಟ್ಟೆಯಲ್ಲಿ ನೋಡಲು ಸಿಗುವ ಎಷ್ಟೋ ಜಿಲ್ಲೆ ಪಟ್ಟಣಗಳು ನಮ್ಮಲ್ಲಿವೆ. ಮಾರುಕಟ್ಟೆಗೆ ದಾಳಿಂಬೆ ಬಂದರೂ ಬಡವರು, ಮಧ್ಯಮ ವರ್ಗದವರು ಈ ದಾಳಿಂಬೆಗಳನ್ನು ಕೊಂಡುತಿನ್ನಲು ಸಾಧ್ಯವೇ ಇಲ್ಲ. ಬಾಯಲ್ಲಿ ನೀರೂರಿಸಬೇಕಷ್ಟೆ!

ನಾವು ದಾಳಿಂಬೆ ಹಣ್ಣುಗಳನ್ನು ಕೊಂಡು ಕಾರಿನೊಳಗೆ ಕುಳಿತಾಗ ಒಬ್ಬ ವಯಸ್ಸಾದ ಮಹಿಳೆ ಬುಟ್ಟಿ ಹೊತ್ತುಕೊಂಡು ಕಿಟಕಿಯ ಬಳಿ ಬಂದರು. 'ನಾವು ದಾಳಿಂಬೆ ಕೊಂಡು ಆಯಿತು' ಎಂದೆ. ಆಕೆ ಪರವಾಗಿಲ್ಲ ಎಂದು ಒಂದು ದಾಳಿಂಬೆಯನ್ನು ಉಚಿತವಾಗಿ ಕೈ ಚಾಚಿ ಮುಂದೆ ಮಾಡಿದರು. ಪಾಪ, ನೋಡಲು ಬಡವಳಂತೆ ಕಾಣುತ್ತಿದ್ದ ಮಾಸಿದ ಬಟ್ಟೆಗಳ ಅವರಿಂದ ಉಚಿತವಾಗಿ ಆ ದಾಳಿಂಬೆ ಪಡೆಯಲು ನನಗೆ ಮುಜುಗರವಾಯಿತು. ಆದರೂ ಒತ್ತಾಯ ಮಾಡಿ ತಿಂದು ನೋಡಿ ಎಂದು ಕೊಟ್ಟೇಬಿಟ್ಟರು. ಆಕೆಯ ಔದಾರ್ಯಕ್ಕೆ ಬೆರಗಾದೆ. ಬಹುಶಃ ಇದು ಬರೇ ಔದಾರ್ಯವಾಗಿರದೇ ಇಲ್ಲಿ

10 ನೇ ಪುಟಕ್ಕೆ

> ನಮ್ಮಲ್ಲಿ ಏನಿದೆಯೋ ಅದು ಮೌನ; ನಂತರ ಪಡೆದದ್ದು ವಾಚಾಳಿ
>
> - ಖಲೀಲ್ ಗಿಬ್ರಾನ್

# ಸುಸ್ಥಿರ ನಗರ ಜೀವನಾವಕಾಶ

## ದಕ್ಷಿಣ ಭಾರತ ಮಟ್ಟದ ಕಾರ್ಯಾಗಾರ




ಸುಸ್ಥಿರ ನಗರ ಜೀವನಾವಕಾಶ ಕುರಿತ ದಕ್ಷಿಣ ಭಾರತ ಮಟ್ಟದ ಕಾರ್ಯಾಗಾರದಲ್ಲಿ ತಮ್ಮ ವಿಚಾರಗಳನ್ನು ಮಂಡಿಸುತ್ತಿರುವ ಮೈಸೂರು ನಗರಪಾಲಿಕೆ ಹಾಗೂ 'ಮುಡಾ' ಆಯುಕ್ತ ಶ್ರೀ ಮಣಿವಣ್ಣನ್

ನಗರ ಯೋಜನೆಗೆ ಒಂದು ಸಾಂಸ್ಕೃತಿಕ ಆಯಾಮವನ್ನು ನೀಡಿದವರು ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಉಪ ಕುಲಪತಿ ಡಾ. ಬಿ. ಎ. ವಿವೇಕ ರೈಯವರು. ''ನಗರದಲ್ಲಿ ವಾಸಿಸುವ ಬಹುತೇಕ ಮಂದಿ ಅಭಿವೃದ್ಧಿಯನ್ನು ಅರಸುತ್ತಾ ನಗರಕ್ಕೆ ಬಂದವರಾಗಿರುವುದರಿಂದ ಅವರ ಗ್ರಾಮ ಕೇಂದ್ರಿತ ನಗರ ಸಂಸ್ಕೃತಿಗೆ ನಗರ ಯೋಜನೆಯಲ್ಲಿ ಒತ್ತುಕೊಡಬೇಕು ಮತ್ತು ಇದಕ್ಕೆ ಮಾರುಕಟ್ಟೆ ಒದಗಿಸಲೂ ಸಾಧ್ಯ" ಎಂದು ಅವರು ಹೇಳಿದರು. ರಾಜ್ಯ ನಗರಾಭಿವೃದ್ಧಿ ಸಂಸ್ಥೆಯಲ್ಲಿ ಇತ್ತೀಚೆಗೆ ದಕ್ಷಿಣ ಭಾರತ ಮಟ್ಟದ 'ನಗರ ಜೀವನಾವಕಾಶ' ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

'ಇಷ್ಟರ ತನಕ ಗ್ರಾಮೀಣ ಬಡತನಕ್ಕೆ ಮಾತ್ರ ಹೆಚ್ಚಿನ ಒತ್ತು ನೀಡಲಾಗಿದೆ. ಆದರೆ ಈಗ ನಗರಾಭಿವೃದ್ಧಿಗೂ ಮಹತ್ವ ನೀಡಬೇಕಾದ ಪರಿಸ್ಥಿತಿ ಬಂದಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ನಗರ ಸಂಸ್ಕೃತಿಯ ಸ್ವರೂಪ ಬದಲಾಗುತ್ತಿದೆ. ಜನರ ಬೇಡಿಕೆ, ಆಕಾಂಕ್ಷೆಗಳು ಬದಲಾಗುತ್ತಿವೆ. ಅವುಗಳನ್ನು ಪೂರೈಸಲು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಅವರಿಗೆ ಮುಖ್ಯವಾಗಿ ಬೇಕಾಗಿರುವುದು ಜೀವನದ ಭದ್ರತೆಯಾಗಿರುವುದರಿಂದ ನಾವು ಅದನ್ನು ಒದಗಿಸಲು ಶಕ್ತವಾಗಬೇಕು' ಎಂದು ಅವರು ಹೇಳಿದರು.

'ನಗರ ಯೋಜನೆಯಲ್ಲಿ ನಾವು ಕ್ಲೀಷೆಗಳನ್ನು ಬಿಟ್ಟುಬಿಟ್ಟು ವಾಸ್ತವಿಕತೆಗೆ ಹೆಚ್ಚಿನ ಒತ್ತು ನೀಡಬೇಕು. ನಗರ ಯೋಜನೆಯಲ್ಲಿ ಮುಖ್ಯವಾದ ಸವಾಲುಗಳೆಂದರೆ ವಸತಿ ಮತ್ತು ಶೌಚ. ಇದನ್ನು ಪೂರೈಸಲು ನಮಗೆ ಸಾಧ್ಯವಾಗಬೇಕು. ನಗರ ಜೀವನದ ಒತ್ತಡದಿಂದ ಸಾಮಾಜಿಕ ಸಮಸ್ಯೆಗಳೂ ಉಂಟಾಗುತ್ತಿವೆ. ಇದನ್ನು ಗಮನದಲ್ಲಿಡದಿದ್ದರೆ ಮುಂದೆ ಗಂಭೀರ ಪರಿಣಾಮಗಳು ಉಂಟಾಗಬಹುದು' ಎಂದು ಅವರು ಹೇಳಿದರು.

'ನಾವು ದಸರಾದಂತಹ ಉತ್ಸವಗಳಲ್ಲಿ ಸಂಸ್ಕೃತಿಯನ್ನು ಕೇವಲ ಪ್ರದರ್ಶನಕ್ಕಿಡುತ್ತೇವೆ. ಕೆಲವರಿಗೆ ಮಾತ್ರ ಅವಕಾಶ ನೀಡುತ್ತೇವೆ. ಜನರೊಳಗಿನ ಸಂಸ್ಕೃತಿಗಳನ್ನು ಪುನರುಜ್ಜೀವನಗೊಳಿಸಬೇಕು. ಇದು ಕೇವಲ ಹಣದ ಪ್ರಶ್ನೆಯಲ್ಲ. ಸುಖ, ಸಂತೋಷ ಹಾಗೂ ಆರ್ಥಿಕತೆ ಜನ ಜೀವನದ ಜೊತೆ ಸಮ್ಮಿಳಿತವಾಗಿ ಸಾಗಬೇಕು' ಎಂಬುದು ಅವರ ಮಾತಿನ ಮೂಲ ಮರ್ಮವಾಗಿತ್ತು ಮತ್ತು ನಗರ ಯೋಜನೆಯಲ್ಲಿ ಇವು ಅಡಕವಾಗಿರಬೇಕು ಎಂಬುದು ಅವರ ಉದ್ದಿಶ್ಯವಾಗಿತ್ತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರಾದ ಶ್ರೀ ಸಿ. ಎಸ್. ಸುರಂಜನ ಅವರು ಮಾತನಾಡುತ್ತಾ, 'ನಗರ ಬಡತನದ ವಿಷಯಕ್ಕೆ ಆಡಳಿತಾತ್ಮಕ ದೃಷ್ಟಿಯಿಂದ ಸಾಕಷ್ಟು ಮಹತ್ವ ಕೊಡಲಾಗುತ್ತಿಲ್ಲ. ಗ್ರಾಮೀಣ ಬಡತನಕ್ಕೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಆದರೆ ಪ್ರಸಕ್ತ ಪರಿಸ್ಥಿತಿಯಲ್ಲಿ ಭವಿಷ್ಯವು ನಗರಗಳಲ್ಲಿ ನಿಂತಿದೆ. ನಗರಗಳ ಬಡವರನ್ನು ಕಡೆಗಣಿಸಲಾಗುತ್ತಿದೆ. ನಾವು ನಗರ ಯೋಜನೆಗಳನ್ನು ಕುರಿತು

**ನಮ್ಮ ನಗರ**

ಚಿಂತಿಸುವಾಗ ದೊಡ್ಡ ನಗರಗಳನ್ನೇ ಕುರಿತು ಚಿಂತಿಸುತ್ತೇವೆ. ನಗರವೊಂದು ಸುಸ್ಥಿರವಾಗಿರಲು ಬೇರೆ ಬೇರೆ ಉದ್ಯೋಗ ಮಾಡುವವರು ಬೇಕಾಗುತ್ತಾರೆ. ಆದರೆ ಅವರಿಗೇ ಯೋಜನೆಯಲ್ಲಿ ಸ್ಥಾನ ಕೊಡುತ್ತಿಲ್ಲ' ಎಂದರು.

'ಈ ರೀತಿಯ ಕೆಲಸಗಾರರ ಸೇವೆಯು ಅಗತ್ಯವಾಗಿದ್ದು, ಅದನ್ನು ಗುರುತಿಸಬೇಕು. ನಾವು ನಗರದ ಬಡವರ ಮನೆಗಳಿರುವ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಕರೆಯುತ್ತೇವೆ. ಒಂದು ರೀತಿಯ ಕೊಳಕು ತುಂಬಿದ ಜಾಗ ಎಂಬ ರೀತಿಯಲ್ಲಿ ನೋಡುತ್ತೇವೆ. ಇಂತಹಾ ಮನೋಭಾವ ಬದಲಾಗಬೇಕು. ನಗರ ಯೋಜನೆಯಲ್ಲೂ ಇದು ಎದ್ದು ಕಾಣುತ್ತದೆ. ಶ್ರೀಮಂತ ವಠಾರಗಳು ಎತ್ತರದ ಪ್ರದೇಶಗಳಲ್ಲಿದ್ದು, ಬಡವರ ಮನೆಗಳು ಅಥವಾ ಸ್ಲಂಗಳು ಯಾವಾಗಲೂ ತಗ್ಗು ಪ್ರದೇಶಗಳಲ್ಲಿರುತ್ತದೆ. ನೆರೆಯ ಸಂದರ್ಭದಲ್ಲಿ ಹೆಚ್ಚಿನ ತೊಂದರೆಗೆ ಒಳಗಾಗುವವರು ಅವರೇ' ಎಂದು ಶ್ರೀ ಸುರಂಜನ ಅವರು ಅಭಿಪ್ರಾಯಪಟ್ಟರು.

'ನಗರ ಬಡತನ ನಿವಾರಣೆಗೆ ಮೂರು ಆಯಾಮಗಳ ಕಾರ್ಯಕ್ರಮ ನಡೆಯಬೇಕು. ಮೊದಲನೆಯದಾಗಿ ಅವರಿಗೆ ವಸತಿ, ಕುಡಿಯುವ ನೀರು ಮತ್ತು ಶೌಚಾಲಯಗಳನ್ನು ಒದಗಿಸುವುದು. ಎರಡನೆಯದು ಉದ್ಯೋಗಾವಕಾಶ ಮತ್ತು ಕಿರು ಸಾಲಗಳನ್ನು ಒದಗಿಸಿ ಅವರು ಸ್ವಾವಲಂಬಿಗಳಾಗಿ ಮಾಡುವುದು ಮತ್ತು ಮೂರನೆಯದಾಗಿ ಅವರಿಗೂ ಸಾಮಾಜಿಕ ಸ್ಥಾನಮಾನಗಳನ್ನು ಒದಗಿಸುವುದು' ಎಂದು ಅವರು ಹೇಳಿದರು.

'ಸದ್ಯಕ್ಕೆ ಈ ವಿಷಯದಲ್ಲಿ ಸಮನ್ವಯದಿಂದ ಕಾರ್ಯ ನಡೆಯುತ್ತಿಲ್ಲ. ಅದಕ್ಕೆ ತಕ್ಕ ವೇದಿಕೆಯೂ ಇಲ್ಲದಾಗಿದೆ. ಹಲವಾರು ವಿಭಾಗಗಳಲ್ಲಿ ಜವಾಬ್ದಾರಿಯು ಹಂಚಿಹೋಗಿರುವುದರಿಂದ ಸಮನ್ವಯ ಸಾಧ್ಯವಾಗುತ್ತಿಲ್ಲ. ಇದಕ್ಕೆ ತಕ್ಕ ಕಾರ್ಯಯೋಜನೆಯನ್ನು ರೂಪಿಸಬೇಕಾಗಿದೆ' ಎಂದು ಅವರು ಹೇಳಿದರು.

ಇದಕ್ಕಿಂತ ಮುನ್ನ ಅತಿಥಿಗಳನ್ನು ಸ್ವಾಗತಿಸುತ್ತಾ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಶ್ರೀ ಕೆ. ಆರ್. ಜಯಪ್ರಕಾಶ ರಾವ್ ಅವರು, 'ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ನಗರ ಬಡತನಕ್ಕೆ ಹೆಚ್ಚಿನ ಒತ್ತು ನೀಡಲಾಗಿರಲಿಲ್ಲ. ಸಂವಿಧಾನದ 74ನೇ ತಿದ್ದುಪಡಿಯ ನಂತರ ನಗರಾಡಳಿತದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಬರುತ್ತಿವೆ. 'ಜೆಎನ್‌ಎನ್‌ಯುಆರ್‌ಎಂ'ನಂತಹ ಬೃಹತ್ ಮಟ್ಟದ ನಗರ ಪುನಶ್ಚೇತನ ಯೋಜನೆಗಳು ಬರುತ್ತಿವೆ. ಈ ನಿಟ್ಟಿನಲ್ಲಿ ನಗರಗಳಲ್ಲಿ ಸುಸ್ಥಿರ ಹಾಗೂ ಸುರಕ್ಷಿತ ಜೀವನಾವಕಾಶ ಒದಗಿಸುವ ನಿಟ್ಟಿನಲ್ಲಿ ಚಿಂತನೆ ನಡೆಯಬೇಕಾಗಿದೆ' ಎಂದು ಅವರು ಹೇಳಿದರು.

12 ನೇ ಪುಟಕ್ಕೆ

# ವಿಕೇಂದ್ರೀಕರಣದ ಪರಿಣಾಮಕ್ಕೊಂದು ಜೀವಂತ ಉದಾಹರಣೆ

ಅಧಿಕಾರ ವಿಕೇಂದ್ರೀಕರಣದಿಂದ ಭ್ರಷ್ಟಾಚಾರ ವಿಕೇಂದ್ರೀಕರಣವಾಗುತ್ತದೆಯೇ ಹೊರತು ನಿಜವಾದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಹೇಳುವವರಿಗೆ ಉತ್ತರವಾಗಿ ಕರ್ನಾಟಕದಂತೆಯೇ ಮಧ್ಯಪ್ರದೇಶ ರಾಜ್ಯದಲ್ಲಿಯೂ ಹಲವಾರು ಗ್ರಾಮಗಳು ಅತ್ಯಂತ ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ. ಉತ್ತಮ ಮಾದರಿ ಎಲ್ಲಿದ್ದರೂ ಅದರಿಂದ ನಾವೂ ಪಾಠ ಕಲಿಯಬೇಕೆಂಬ ಉದ್ದೇಶದಿಂದ ಅಲ್ಲಿನ ಒಂದು ಉದಾಹರಣೆಯನ್ನು ಇಲ್ಲಿ ಸಾದರಪಡಿಸಲಾಗಿದೆ.

ವಿಶ್ವಸಂಸ್ಥೆಯಿಂದ ಪ್ರಾಯೋಜಿತವಾಗಿರುವ 'ಸೊಲ್ಯೂಷನ್ ಎಕ್ಸ್‌ಚೇಂಜ್' (ಪರಿಹಾರ ವಿನಿಮಯ) ಹೆಸರಿನ ಸಂಸ್ಥೆಯ ಆಹ್ವಾನದ ಮೇರೆಗೆ 'ವಿಕೇಂದ್ರೀಕರಣ ಸಮುದಾಯ'ದ ಎರಡನೇ ಸಮಾವೇಶದಲ್ಲಿ ಭಾಗವಹಿಸಲು ಅಬ್ದುಲ್ ನಜೀರ್‌ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಶ್ರೀ ಎಚ್. ಎಸ್. ಅಶೋಕಾನಂದ ಹಾಗೂ ನಾನು ಮಧ್ಯಪ್ರದೇಶದ ರಾಜಧಾನಿ ಭೋಪಾಲಕ್ಕೆ ಹೋಗಿದ್ದೆವು. ಇದಕ್ಕೆ ವಿವಿಧ ರಾಜ್ಯಗಳಿಂದ ಪ್ರತಿನಿಧಿಗಳು ಬಂದಿದ್ದರು. ವಿಕೇಂದ್ರೀಕರಣ ವ್ಯವಸ್ಥೆಯ ಸಬಲೀಕರಣದ ವಿಷಯದಲ್ಲಿ ಪರಸ್ಪರರ ಅನುಭವಗಳನ್ನು ಹಂಚಿಕೊಳ್ಳಲಾಯಿತು. ಮೂರು ದಿನಗಳ ಈ ಸಮಾವೇಶದ ಕೊನೆಯ ದಿನ ಎರಡು ತಂಡಗಳಲ್ಲಿ ಎರಡು ಗ್ರಾಮ ಪಂಚಾಯಿತಿಗಳಿಗೆ ಭೇಟಿಯನ್ನೂ ಆಯೋಜಿಸಲಾಗಿತ್ತು. ಆಯ್ಕೆಯ ಅವಕಾಶವನ್ನು ನಮಗೇ ಬಿಡಲಾಗಿತ್ತು. ಕ್ಷೇತ್ರ ಭೇಟಿಗಾಗಿ ನಾನು ರಾಜುಖೇಡಿ ಎಂಬ ಒಂದು ಗ್ರಾಮವನ್ನು ಆಯ್ಕೆ ಮಾಡಿದೆ.

ರಾಜುಖೇಡಿ ಗ್ರಾಮ ಪಂಚಾಯಿತಿಯು ಭೋಪಾಲ್‌ನಿಂದ ಸುಮಾರು 35 ಕಿ.ಮೀ. ದೂರದಲ್ಲಿದೆ. ಇದು ಸಿಹೋರ್ ಜಿಲ್ಲೆಯ ಸಿಹೋರ್ ಬ್ಲಾಕ್‌ಗೆ ಸೇರಿದ ಪುಟ್ಟ ಪಂಚಾಯಿತಿ. ಈ ಗ್ರಾಮ ಪಂಚಾಯಿತಿಯ ಒಟ್ಟು ಜನಸಂಖ್ಯೆ ಕೇವಲ 1200. ಇಲ್ಲಿ 235 ಕುಟುಂಬಗಳಿವೆ. ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆ 17. ಮಧ್ಯಪ್ರದೇದಲ್ಲಿ ಗ್ರಾಮ ಪಂಚಾಯಿತಿಗಳು ಗಾತ್ರದಲ್ಲಿ ತುಂಬಾ ಚಿಕ್ಕವು. ಈ ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳು ಹೊಂದಿರುವ ಸರಾಸರಿ ಜನಸಂಖ್ಯೆ 1000 ಮಾತ್ರ. ಇಲ್ಲಿ ಗ್ರಾಮ ಪಂಚಾಯಿತಿ ಸದಸ್ಯನ್ನು 'ಪಂಚ್' ಎಂದು ಕರೆಯುತ್ತಾರೆ. ಗರಿಷ್ಠ 100 ಮತದಾರರಿರುವ ಒಂದು ವಾರ್ಡನ್ನು ಇವರು ಪ್ರತಿನಿಧಿಸುತ್ತಾರೆ. ಒಂದು ಗ್ರಾಮ ಪಂಚಾಯಿತಿಯಲ್ಲಿ ಗರಿಷ್ಠ 20 ವಾರ್ಡ್‌ಗಳು ಇರುವುದನ್ನು ನಾವು ಕಾಣಬಹುದು. ಗ್ರಾಮ ಪಂಚಾಯಿತಿ ಅಧ್ಯಕ್ಷನ್ನು 'ಸರಪಂಚ್' ಎಂದು ಕರೆಯುತ್ತಾರೆ. ಸರಪಂಚನ ಆಯ್ಕೆಯನ್ನು ಗ್ರಾಮ ಪಂಚಾಯಿತಿಯ ಎಲ್ಲಾ ಮತದಾರರು ಸೇರಿ ಮಾಡುತ್ತಾರೆ.

ರಾಜುಖೇಡಿ ಗ್ರಾಮ ಪಂಚಾಯಿತಿಯಲ್ಲಿ ಮೂರು ಗ್ರಾಮಗಳಿದ್ದು, ನಮಗೆ ಮೊದಲು ಸಿಕ್ಕಿದ ಗ್ರಾಮದ ಹೆಸರು ಸೇಮ್ಲಿ ಖಿರ್ದ್. ಅಲ್ಲೊಂದು ಮಾಹಿತಿ ಕೇಂದ್ರವಿತ್ತು.. ಆ ಗ್ರಾಮಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಕಟ್ಟಡದ ಗೋಡೆಯ ಮೇಲೆ ಬರೆಯಲಾಗಿದೆ. ಇದೇ ಕಟ್ಟಡದಲ್ಲಿ ಯುವತಿಯರ ಸ್ವ ಸಹಾಯ ಸಂಘದ ಚಟುವಟಿಕೆಗಳೂ ನಡೆಯುತ್ತವೆ. ಆರೋಗ್ಯ, ಶಿಕ್ಷಣ ಇತ್ಯಾದಿ ವಿಷಯಗಳ ಕುರಿತು ಮಾಹಿತಿ ನೀಡುವ ಸಣ್ಣ ಗ್ರಂಥಾಯವೂ ಅಲ್ಲಿದೆ. ಅಲ್ಲಿ ನಾವು ಕೇಳಿದ ಪ್ರಶ್ನೆಗಳಿಗೆಲ್ಲಾ ಅಲ್ಲಿನ ಸ್ವಸಹಾಯ ಸಂಘದವರು ಕ್ಷಿಪ್ರವಾದ ಉತ್ತರ ನೀಡಿ ನಮ್ಮನ್ನು ಆಶ್ಚರ್ಯಗೊಳಿಸಿದರು. ಅವರ ಜಾಗೃತಿ ಉನ್ನತ ಮಟ್ಟದ್ದಾಗಿತ್ತು. ಈ ಸ್ವ ಸಹಾಯ ಗುಂಪಿನವರು 'ಸ್ಯಾನಿಟರಿ ನ್ಯಾಪ್‌ಕಿನ್'ಗಳನ್ನು ಸಿದ್ಧಪಡಿಸುತ್ತಾರೆ. ಅತ್ಯಂತ

**ನಮ್ಮ ಗ್ರಾಮ**

ಕಡಿಮೆ ಮೊತ್ತಕ್ಕೆ ಅಗತ್ಯ ಇರುವವರಿಗೆ ಮಾರಾಟ ಮಾಡುತ್ತಾರೆ. ಗ್ರಾಮ ಪಂಚಾಯಿತಿಯ ಹೊರಗೂ ಇದಕ್ಕೆ ಮಾರುಕಟ್ಟೆ ಕಂಡು ಕೊಂಡಿದ್ದಾರೆ. ಇವರಿಗೆ ಈ ವಿಷಯದಲ್ಲಿ ಸ್ವಯಂಸೇವಾ ಸಂಸ್ಥೆಯೊಂದು ತರಬೇತಿ ನೀಡಿದೆ.

ನಂತರ ರಾಜುಖೇಡಿ ಗ್ರಾಮಕ್ಕೆ ಹೋದೆವು. ಆ ಎರಡು ಕಿ. ಮೀ. ದೂರದ ಕಿರಿದಾದ ರಸ್ತೆ ತೀರಾ ಇಕ್ಕಟ್ಟಾಗಿತ್ತು. ಊರಿನವರನ್ನು ವಿಚಾರಿಸಿದಾಗ ಮುಂದಿನ ವರ್ಷ ಅದನ್ನು ಸರಿಪಡಿಸುವ ಕಾರ್ಯಕ್ರಮವಿದೆ ಎಂದರು. ಈ ಗ್ರಾಮ ಸಿಹೋರ್ ಜಿಲ್ಲೆಯ ಮೊದಲ 'ನಿರ್ಮಲ ಗ್ರಾಮ ಪುರಸ್ಕಾರ' ಪಡೆದಿದೆ. ಈ ಗ್ರಾಮ ನಿಜವಾಗಿಯೂ ತೀರಾ ಸ್ವಚ್ಛವಾಗಿತ್ತು.

ರಾಜುಖೇಡಿ ಗ್ರಾಮದಲ್ಲಿ ಬದಲಾವಣೆಯ ಚಕ್ರ ಉರುಳಲಾರಂಭಿಸಿ ಬಹಳ ಕಾಲವಾಗಿಲ್ಲ. ಕುಡಿಯುವ ನೀರಿನ ಸಮಸ್ಯೆ, ನೈರ್ಮಲ್ಯ ಮತ್ತು ಶೌಚಾಲಯದ ಸಮಸ್ಯೆ, ಮಕ್ಕಳಿಗೆ ಶಿಕ್ಷಣ ಪಡೆಯಲು ವ್ಯವಸ್ಥೆಯ ಕೊರತೆ, ವಿದ್ಯುತ್ ಸಮಸ್ಯೆ.... ಹೀಗೆ ಹಲವು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದ ಈ ಊರನ್ನು ಸುಧಾರಣೆಯ ದಾರಿಯಲ್ಲಿ ತರಲು ಎರಡು ವರ್ಷಗಳ ಹಿಂದೆ ನಡೆದ ಗ್ರಾಮ ಸಭೆಯಲ್ಲಿ ತೀರ್ಮಾನಿಸಲಾಯಿತು. 'ಸಮರ್ಥನ್' ಸಂಸ್ಥೆ ಕೆಲವು ವರ್ಷಗಳಿಂದ ನಡೆಸುತ್ತಾ ಬಂದ ಪರಿಶ್ರಮ ನಿಧಾನಕ್ಕೆ ಫಲಕೊಡಲಾರಂಭಿಸಿತು. ಈ ಸಂಸ್ಥೆ ಆರಂಭಿಸಿದ ಕಿಶೋರಿ ಸಂಘ, ಯುವಕರ ಸಂಘ, ಮಕ್ಕಳ ಸಂಘ ಮತ್ತು ಗ್ರಾಮ ಪಂಚಾಯಿತಿಯ ಮೂಲಕ ಸಂಘಟಿಸಲಾದ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಂಘಗಳ ಕ್ರಿಯಾತ್ಮಕ ಭಾಗವಹಿಸುವಿಕೆ ಗ್ರಾಮ ಸಭೆಯನ್ನು ಶಕ್ತಗೊಳಿಸಿತು.

ಮೊದಲಿಗೆ ಇವರು ಎತ್ತಿಕೊಂಡಿದ್ದು ಕುಡಿಯುವ ನೀರಿನ ಪೂರೈಕೆಯ ಸಮಸ್ಯೆ. ಗ್ರಾಮ ಪಂಚಾಯಿತಿಯ ಅನುದಾನ ಮತ್ತು ಗ್ರಾಮಸ್ಥರ ಪಾಲುದಾರಿಕೆಯಿಂದ ಕೊಳವೆ ಬಾವಿ ಕೊರೆದು, ಮೋಟರ್ ಹಾಕಿ ನೀರು ಪೂರೈಸಲಾಗುತ್ತಿದೆ. ದೊಡ್ಡ ಸಿಂಟೆಕ್ಸ್ ಟ್ಯಾಂಕ್‌ನಲ್ಲಿ ನೀರು ಸಂಗ್ರಹಿಸುವ ವ್ಯವಸ್ಥೆ ಮಾಡಲಾಗಿದೆ. ಇಂದು ರಾಜುಖೇಡಿಯ ಎಲ್ಲಾ 88 ಮನೆಗಳಿಗೂ ಶುದ್ಧವಾದ ಕುಡಿಯುವ ನೀರು ದಿನದ 24 ಗಂಟೆಯೂ ಲಭ್ಯವಾಗುತ್ತಿದೆ. ಪ್ರತೀ ಕುಟುಂಬಕ್ಕೂ ವೈಯಕ್ತಿಕ ನಲ್ಲಿ ಸಂಪರ್ಕವಿದೆ. ಈ ಸಂಪರ್ಕಕ್ಕಾಗಿ ಕುಟುಂಬಗಳು ವೈಯಕ್ತಿಕವಾಗಿ ವೆಚ್ಚ ಭರಿಸಿದ್ದಾರೆ. ಜೊತೆಗೆ ಸಂಪರ್ಕ ಪಡೆಯುವ ಮೊದಲು ಪ್ರತಿಯೊಂದು ಕುಟುಂಬ ಪಂಚಾಯಿತಿಗೆ ರೂ. 120ನ್ನು ಮುಂಗಡವಾಗಿ ಪಾವತಿಸಿದೆ. ಈ ಪ್ರತೀ ಕುಟುಂಬ ತಿಂಗಳಿಗೆ ರೂ.15 ನೀರಿನ ಕರ ಮತ್ತು ರೂ. 5.00 ನೈರ್ಮಲ್ಯ ಶುಲ್ಕವನ್ನು ಪಾವತಿಸಬೇಕು. ಕಳೆದ ಎರಡು ವರ್ಷಗಳಲ್ಲಿ ನೂರಕ್ಕೆ ನೂರು ತೆರಿಗೆ ಸಂಗ್ರಹವಾಗುತ್ತಿದೆ. ಯಾರಾದರೂ ತಡ ಮಾಡಿದಲ್ಲಿ ತಿಂಗಳ ಗ್ರಾಮ ಸಭೆಯಲ್ಲಿ ಚರ್ಚೆಗೆ ಬರುವುದರಿಂದ ಎಲ್ಲರೂ ನಿಯಮಿತವಾಗಿ ಪಾವತಿಸುತ್ತಾರೆ. ನೀರಿನ ಗುಣಮಟ್ಟ ಪರಿಶೀಲನೆಗೆ ಒಂದು ಯಂತ್ರವನ್ನು ಇಟ್ಟುಕೊಳ್ಳಲಾಗಿದೆ. ಪ್ರತೀ ತಿಂಗಳು ನೀರಿನ ಗುಣಮಟ್ಟ ಪರೀಕ್ಷಿಸುವುದನ್ನು ಕಡ್ಡಾಯ ಮಾಡಲಾಗಿದೆ.

ಎರಡನೆಯದಾಗಿ ವೈಯಕ್ತಿಕ ಶೌಚಾಲಯ ಮತ್ತು ಊರಿನ ನೈರ್ಮಲ್ಯಕ್ಕೆ ಗಮನ ಹರಿಸಲಾಯಿತು. ಇದರ ಫಲವಾಗಿ ಎಲ್ಲಾ 88 ಕುಟುಂಬಗಳು ಶೌಚಾಲಯವನ್ನು ಹೊಂದಿವೆ ಮಾತ್ರವಲ್ಲ ಅದರ ಬಳಕೆಯನ್ನು ಕೂಡಾ ಮಾಡುತ್ತಿದ್ದಾರೆ. ನೀರಿನ ಕೊರತೆ ಇಲ್ಲದ ಕಾರಣ

11 ನೇ ಪುಟಕ್ಕೆ

> ನಾವು ಹೆಚ್ಚಿನ ಸಲ ನಿನ್ನೆಗಳ ಸಾಲ ತೀರಿಸಲು ನಾಳೆಗಳಿಂದ ಸಾಲ ಪಡೆಯುತ್ತೇವೆ
>
> \- ಖಲೀಲ್ ಗಿಬ್ರಾನ್

# ಕೇರಳದ ಯಶಸ್ವಿ ಯೋಜನೆ 'ಕುಟುಂಬಶ್ರೀ'

ಇತ್ತೀಚೆಗೆ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯಲ್ಲಿ ನಡೆದ 'ಸುಸ್ಥಿರ ಜೀವನಾವಕಾಶ' ಕುರಿತ ದಕ್ಷಿಣ ಭಾರತ ಮಟ್ಟದ ಕಾರ್ಯಾಗಾರದಲ್ಲಿ ಅನೇಕ ತಜ್ಞರು ವಿಷಯ ಮಂಡನೆ ಮಾಡಿದ್ದರು. ಅವರಲ್ಲಿ ಕೇರಳದ ವಿಶಿಷ್ಟವಾದ 'ಕುಟುಂಬ ಶ್ರೀ' ಯೋಜನೆಯ ಯೋಜನಾ ನಿರ್ದೇಶಕರಾದ

ಡಾ. ಕೆ. ಕೃಷ್ಣಕುಮಾರ್ ಅವರು ಮಂಡಿಸಿದ ವಿಷಯದ ಸಾರಾಂಶವನ್ನು ಇಲ್ಲಿ ನೀಡುತ್ತಿದ್ದೇವೆ.

ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣವನ್ನು ಸಮಗ್ರ ದೃಷ್ಟಿಕೋನದಿಂದ ಸಾಧಿಸುವ ಉದ್ದೇಶದಿಂದ ಕೇರಳದಲ್ಲಿ 'ಕುಟುಂಬಶ್ರೀ' ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

**ಪರಿಕಲ್ಪನೆ**

ಕೇರಳದಲ್ಲಿ 1998ರಲ್ಲಿ ರಾಜ್ಯ ಬಡತನ ನಿರ್ಮೂಲನ ಅಭಿಯಾನ (ಎಸ್‌ಪಿಇಎಂ) ಆರಂಭಿಸಲಾಯಿತು. ರಾಜ್ಯ ಸರಕಾರ ಮತ್ತು ನಬಾರ್ಡ್ ಜಂಟಿಯಾಗಿ ಆರಂಭಿಸಿದ ಈ ಅಭಿಯಾನ ಹತ್ತು ವರ್ಷಗಳಲ್ಲಿ ಕನಿಷ್ಠ ಕಡು ಬಡತನವನ್ನು ನಿವಾರಿಸುವ ಗುರಿ ಹೊಂದಿತ್ತು. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಹೊಸ ಚೈತನ್ಯ ಪಡೆದ ಸ್ಥಳೀಯಾಡಳಿತ ಸಂಸ್ಥೆಗಳ ಮೂಲಕ ಇದನ್ನು ಅನುಷ್ಠಾನಗೊಳಿಸಲಾಯಿತು. ಈ ಅಭಿಯಾನದ ಮೂಲ ಧ್ಯೇಯ ವಾಕ್ಯವೆಂದರೆ, 'ಮಹಿಳೆಯರ ಮೂಲಕ ಕುಟುಂಬಗಳನ್ನು ಮುಟ್ಟುವುದು, ಕುಟುಂಬಗಳ ಮೂಲ ಸಮುದಾಯವನ್ನು ಮುಟ್ಟುವುದು' ಈ ಯೋಜನೆಯನ್ನು ಹಲವಾರು ಹಿಂದಿನ ಅನುಭವಗಳ ಹೂರಣದಿಂದ ರಚಿಸಲಾಯಿತು. ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯ ಮೂಲಕ ಬಡತನ ನಿರ್ಮೂಲನ ಇದರ ಮೂಲ ಉದ್ದೇಶ.

ಇಂದು 36 ಲಕ್ಷ ಮಹಿಳೆಯರು ಈ ಅಭಿಯಾನದಲ್ಲಿದ್ದಾರೆ. 1,82,2969 ನೆರೆಹೊರೆ (ಎನ್‌ಎಚ್‌ಜಿ)ಗಳಿವೆ. ಇದು 29, 436 ಉಜ್ವಲ ಕಿರು ಕೈಗಾರಿಕೆಗಳು ಮತ್ತು ಸುಮಾರು 54,949 ಮಹಿಳಾ ಮಾಲಕರಿದ್ದಾರೆ. ಬೇರೆ ಬೇರೆ ಇಲಾಖೆಗಳ ಸಂಪನ್ಮೂಲ, ಚಿಂತನೆ ಹಾಗೂ ಯೋಜನೆಗಳನ್ನು 'ಕುಟುಂಬಶ್ರೀ' ಯ ಸ್ಥಳೀಯಾಡಳಿತ ಮಟ್ಟದ ಒಕ್ಕೂಟವಾಗಿರುವ ಸಮುದಾಯ ಅಭಿವೃದ್ಧಿ ಸಂಘ (ಸಿಡಿಎಸ್)ಗಳ ಮೂಲಕ ಜೊತೆಗೆ ತರುವ ಪ್ರಯತ್ನ ಇದಕ್ಕೆ ಕಾರಣ.

**ಯೋಜನೆಯ ಹುಟ್ಟು**

ಕೇರಳದಲ್ಲಿ 1995ರ ಅಕ್ಟೋಬರ್‌ನಲ್ಲಿ ಹೆಚ್ಚಿನ ಅಭಿವೃದ್ಧಿ ಸಂಸ್ಥೆಗಳನ್ನು ಅದರ ಸಿಬ್ಬಂದಿಗಳ ಜೊತೆಗೆಯೇ ಸ್ಥಳೀಯಾಡಳಿತ ಸಂಸ್ಥೆಗಳಿಗೆ ವರ್ಗಾಯಿಸಲಾಯಿತು. 1996ರ ಆಗಸ್ಟ್‌ನಲ್ಲಿ ರಾಜ್ಯ ಯೋಜನೆಯ ಮೂರನೇ ಒಂದರಷ್ಟು ಸಂಪನ್ಮೂಲವನ್ನು ಸ್ಥಳೀಯಾಡಳಿತ ಸಂಸ್ಥೆಗಳಿಗೆ ವರ್ಗಾಯಿಸಿ, ಜನ ಯೋಜನೆಯ ಅಭಿಯಾನವನ್ನು ಆರಂಭಿಸಲಾಯಿತು.

ಅದಕ್ಕಿಂತಲೂ ಹಿಂದೆ 1992ರಲ್ಲಿ ಆಲಪ್ಪುಳ ಮುನಿಸಿಪಾಲಿಟಿಯಲ್ಲಿ ನಗರ ಬಡವರಿಗೆ ಮೂಲ ಸೇವೆಗಳು (ಯುಬಿಎಸ್‌ಪಿ), ನಂತರ 1994ರಲ್ಲಿ ಅತ್ಯಂತ ಹಿಂದುಳಿದ ಮಲಪ್ಪುರ ಜಿಲ್ಲೆಯಲ್ಲಿ ಆರಂಭಿಸಿದ ಪ್ರಾಯೋಗಿಕ ಯೋಜನೆ ಇತ್ಯಾದಿಯಾಗಿ ಹಲವಾರು ಅನುಭವಗಳ ಆಧಾರದಲ್ಲಿ 'ಕುಟುಂಬ ಶ್ರೀ'ಯನ್ನು ಯೋಜಿಸಲಾಗಿದೆ.

**ಕಾರ್ಯತಂತ್ರ**

ಈ ಯೋಜನೆಯಲ್ಲಿ ಮೂಲಭೂತವಾಗಿ ಮತ್ತು ಮುಖ್ಯವಾಗಿ ಈ ಕೆಳಗಿನ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲಾಯಿತು:

- ✦ ಪಾರದರ್ಶಕವಾದ, ಆರ್ಥಿಕೇತರ ಬಡತನ ಸೂಚ್ಯಂಕದ ಮೂಲಕ ಬಡವರನ್ನು ಗುರುತಿಸುವುದು
- ✦ ಅವರನ್ನು ಮೂರು ಹಂತಗಳ ಸಮುದಾಯಾಧರಿತ ಸಂಘಟನೆ (ಸಿಬಿಒ)ಗಳಾಗಿ ಸಂಘಟಿಸುವುದು.
- ✦ ವಾರದ ದೇಣಿಗೆಯಿಂದ ಆರಂಭಿಸಿ, ಕಿರು ಸಾಲದ ಮೂಲಕ ಮಹಿಳೆಯರಿಗೆ ಒಂದು ಅಸಾಂಪ್ರದಾಯಿಕ ಬ್ಯಾಂಕ್ ವ್ಯವಸ್ಥೆ ರೂಪಿಸುವುದು.
- ✦ ಕಿರು ಉದ್ದಿಮೆಗಳನ್ನು ರೂಪಿಸುವುದು.
- ✦ ಸ್ಥಳೀಯಾಡಳಿತ ಸಂಸ್ಥೆಗಳೊಂದಿಗೆ ಬಲವಾದ ಸಂಬಂಧ.
- ✦ ಬೇರೆ ಬೇರೆ ಬಡತನ ನಿರ್ಮೂಲನ ಯೋಜನೆಗಳ ಮಧ್ಯಪ್ರವೇಶ
- ✦ ಅಗತ್ಯಗಳಿಗೆ ಅನುಗುಣವಾಗಿಯೇ ಯೋಜನೆಗಳ ನಿರೂಪಣೆ
- ✦ ಸಮುದಾಯದಿಂದಲೇ ಸ್ಥಳೀಯಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಮೇಲುಸ್ತುವಾರಿ.

**ಬಡತನ ಸೂಚ್ಯಂಕ**

ಕೇರಳದಲ್ಲಿ ಬಡವರನ್ನು ಗುರುತಿಸಲು ಒಂಭತ್ತು ಅಂಕಿಗಳ ಬಡತನ ಸೂಚ್ಯಂಕ ರೂಪಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ:

1. ಐದು ಸೆಂಟ್‌ಗಿಂತ ಕಡಿಮೆ ಜಮೀನು/ ಭೂ ರಹಿತರು.
2. ಮನೆ ಇಲ್ಲದಿರುವುದು/ ಮನೆ ಜರ್ಝರಿತವಾಗಿರುವುದು
3. ಶೌಚಾಲಯ ಇಲ್ಲದಿರುವುದು
4. ನೂರೈವತ್ತು ಮೀಟರ್ ದೂರದೊಳಗೆ ಸುರಕ್ಷಿತ ಕುಡಿಯುವ ನೀರು ಲಭ್ಯವಿಲ್ಲದಿರುವುದು
5. ಮಹಿಳೆಯರೇ ಯಜಮಾನರಾಗಿರುವ ಕುಟುಂಬ/ ಮನೆಯಲ್ಲಿ ಒಬ್ಬರು ವಿಧವೆ ಅಥವಾ ವಿಚ್ಛೇದಿತ ಮಹಿಳೆಯ ಅಸ್ತಿತ್ವ/ ಪರಿತ್ಯಕ್ತ ಮಹಿಳೆ/ ಮದುವೆಯಾಗದ ತಾಯಿ
6. ಕುಟುಂಬದಲ್ಲಿ ನಿಯಮಿತ ಉದ್ಯೋಗ ಇರುವ ವ್ಯಕ್ತಿ ಇಲ್ಲದಿರುವುದು
7. ಸಾಮಾಜಿಕವಾಗಿ ದುರ್ಬಲ ವರ್ಗಗಳಾದ ಪರಿಶಿಷ್ಟ ಜಾತಿ/ ಬುಡಕಟ್ಟಿಗೆ ಸೇರಿರುವುದು
8. ಕುಟುಂಬದಲ್ಲಿ ಮಾನಸಿಕ ಅಸ್ವಸ್ಥ? ವಿಕಲ ಚೇತನ/ ತೀವ್ರ ಅಸೌಖ್ಯದ ಸದಸ್ಯರ ಅಸ್ತಿತ್ವ
9. ಬಣ್ಣದ ಟಿ. ವಿ. ಇಲ್ಲದಿರುವ ಕುಟುಂಬ

ಈ ಪ್ರತಿಯೊಂದು ಅಂಶಕ್ಕೆ ಒಂದೊಂದು ಅಂಕ ಸಿಗುತ್ತದೆ. ಕನಿಷ್ಠ ನಾಲ್ಕು ಅಂಕ ಸಿಕ್ಕವರನ್ನು ಬಡವರೆಂದು ಪರಿಗಣಿಸಲಾಗುವುದು.

**ಸಾಂಸ್ಥಿಕ ರಚನೆ**

ಇಡೀ ಯೋಜನೆಯಲ್ಲಿ ಮೂರು ಹಂತಗಳ ಸಂಘಟನೆಗಳನ್ನು ರೂಪಿಸಲಾಗಿದೆ. ಮೊದಲನೆಯದು ನೆರೆಹೊರೆಯ ಗುಂಪು (ಎನ್‌ಎಚ್‌ಜಿ ಎಂದರೆ ನೇಬರ್ ಹುಡ್ ಗ್ರೂಪ್), ಎರಡನೆಯದು ಪ್ರದೇಶಾಭಿವೃದ್ಧಿ ಸಂಘ (ಎಡಿಎಸ್ ಎಂದರೆ ಏರಿಯಾ ಡೆವಲಪ್‌ಮೆಂಟ್ ಸೊಸೈಟಿ) ಮತ್ತು ಮೂರನೆಯದು ಸಮುದಾಯ ಅಭಿವೃದ್ಧಿ ಸಂಘ (ಸಿಡಿಎಸ್ ಎಂದರೆ ಕಮ್ಯೂನಿಟಿ ಡೆವಲಪ್‌ಮೆಂಟ್ ಸೊಸೈಟಿ).

**ನೆರೆಹೊರೆಯ ಗುಂಪು (ಎನ್‌ಎಚ್‌ಜಿ)**

ಒಂದು ಪರಿಸರದಲ್ಲಿರುವ 15ರಿಂದ 40 ಬಡ ಕುಟುಂಬಗಳಿಂದ ಒಬ್ಬೊಬ್ಬರು ಮಹಿಳೆಯರನ್ನು ಒಂದು ನೆರೆಹೊರೆಯ ಗುಂಪಾಗಿ ಸಂಘಟಿಸಲಾಗುತ್ತದೆ. ಅದರಲ್ಲಿ ಐವರ ಸಮಿತಿಯನ್ನು ಪ್ರಜಾಸತ್ತಾತ್ಮಕವಾಗಿ ನೇಮಿಸಲಾಗುತ್ತದೆ. ಇವರನ್ನು 'ಬರಿಗಾಲಿನ

> ಒಬ್ಬ ಸರ್ವಾಧಿಕಾರಿ ಎಂದರೆ ಸಂಪೂರ್ಣ ಕಿವುಡಾಗಿರುವ ಒಬ್ಬ ಭಾಷಣಕಾರ. ಆತ ಹೇಳುತ್ತಾನೆ; ಕೇಳುವುದಿಲ್ಲ
>
> - ಖಲೀಲ್ ಗಿಬ್ರಾನ್

ವಿಶೇಷಜ್ಞರು' (Bare foot specialists) ಎಂದು ಕರೆಯಲಾಗುತ್ತದೆ. ಇವರು ಯಾರೆಂದರೆ:

- ಸಮುದಾಯ ಆರೋಗ್ಯ ಚಟುವಟಿಕೆಗಳ ಸ್ವಯಂಸೇವಕಿ
- ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಸ್ವಯಂಸೇವಕಿ
- ಆದಾಯೋತ್ಪನ್ನ ಚಟುವಟಿಕೆಗಳ ಸ್ವಯಂಸೇವಕಿ
- ಕಾರ್ಯದರ್ಶಿ (ಜನರಲ್ ಮ್ಯಾನೇಜರ್)
- ಅಧ್ಯಕ್ಷೆ (ನಾಯಕಿ ಮತ್ತು ಮುಖ್ಯ ಸಂಯೋಜಕಿ)

**ಪ್ರದೇಶ ಅಭಿವೃದ್ಧಿ ಸಂಘ (ಎಡಿಎಸ್)**

ಒಂದು ವಾರ್ಡ್‌ನಲ್ಲಿರುವ ಎಲ್ಲಾ ಎನ್‌ಎಚ್‌ಜಿಗಳ ಅಂದರೆ ನೆರೆಹೊರೆ ಗುಂಪುಗಳ ಒಕ್ಕೂಟವಿದು.

**ಸಮುದಾಯ ಅಭಿವೃದ್ಧಿ ಸಂಘ (ಸಿಡಿಎಸ್)**

ಇದು ಸ್ಥಳೀಯಾಡಳಿತ ಸಂಸ್ಥೆಗಳ ಮಟ್ಟದಲ್ಲಿ ಅಂದರೆ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇರುವ ಉನ್ನತ ಸಂಘ. ಇದನ್ನು ತಿರುವಾಂಕೂರು-ಕೊಚ್ಚಿ ಸಾಹಿತ್ಯಿಕ, ವೈಜ್ಞಾನಿಕ ಮತ್ತು ಜನಸೇವಾ ಸಂಘಗಳ ಕಾಯಿದೆ 1955ರ ಪ್ರಕಾರ ನೋಂದಾಯಿಸಲಾಗುವುದು. ಎಲ್ಲಾ ಅಭಿವೃದ್ಧಿ ಚಟುವಟಿಕೆಗಳು ಈ ಸಿಡಿಎಸ್ ಮೂಲಕ ನಡೆಯುತ್ತವೆ.

**ಕಾರ್ಯಾಚರಣೆ**

ನೆರೆಹೊರೆ ಗುಂಪುಗಳು ಪ್ರತೀ ವಾರ ಸಭೆ ಸೇರಿ ಮಾಹಿತಿ ಸೇರಿ ತಮ್ಮೊಳಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತವೆ. ನಂತರ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸಿ ಕಿರು ಯೋಜನೆಗಳನ್ನು ರೂಪಿಸುತ್ತವೆ. ಅವು ಸಣ್ಣ ಪ್ರಮಾಣದ ದೇಣಿಗೆಯನ್ನು ಸಂಘಟಿಸುತ್ತವೆ. ಸದಸ್ಯರಿಗೆ ಕಿರು ಸಾಲ ಒದಗಿಸುತ್ತವೆ. ಸಾಲ ಮರುಪಾವತಿಯ ಮೇಲುಸ್ತುವಾರಿಯನ್ನು ಸದಸ್ಯರೇ ನಡೆಸುತ್ತಾರೆ. ನಂತರ ಸಂಪನ್ಮೂಲಗಳ ಅಂದಾಜು, ಅಗತ್ಯಗಳನ್ನು ಆದ್ಯತಾನುಸಾರ ಪಟ್ಟಿಮಾಡುವುದು, ಕಾರ್ಯಯೋಜನೆ ತಯಾರಿಸಿ ಅದರ ಅನುಷ್ಠಾನಗೊಳಿಸುವುದು ನಡೆಯುತ್ತದೆ. ದೈನಂದಿನ ನಿರ್ವಹಣೆಯನ್ನು ಚುನಾಯಿತ ಐವರು ಸದಸ್ಯರ ಸಮಿತಿ ನಡೆಸುತ್ತದೆ.

ನೆರೆಹೊರೆ ಗುಂಪುಗಳ ಕಿರುಯೋಜನೆಗಳನ್ನು, ಪ್ರದೇಶಾಭಿವೃದ್ಧಿ ಸಂಘದ ಮಟ್ಟದಲ್ಲಿಯೂ, ಪ್ರದೇಶಾಭಿವೃದ್ಧಿ ಸಂಘಗಳ ಮಟ್ಟದ ಕಿರುಯೋಜನೆಗಳನ್ನು ಸಮುದಾಯ ಅಭಿವೃದ್ಧಿ ಸಂಘಗಳ ಮಟ್ಟದಲ್ಲಿಯೂ ಕ್ರೋಢೀಕರಿಸಿ, ಕಾರ್ಯಯೋಜನೆ ರೂಪಿಸಿ ಜಾರಿಗೊಳಿಸಲಾಗುತ್ತದೆ.

**ಪ್ರಾದೇಶಿಕ ಅಭಿವೃದ್ಧಿ ಸಂಘ**

ಈ ಯೋಜನೆಯ ಎರಡನೇ ಹಂತವಾದ ಪ್ರಾದೇಶಿಕ ಅಭಿವೃದ್ಧಿ ಸಂಘ (ಎಡಿಎಸ್)ದ ನಿರ್ಧಾರಗಳನ್ನು ಮಾಡುವವರು ಬೇರೆ ಬೇರೆ ನೆರೆಹೊರೆ ಗುಂಪುಗಳಿಂದ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಪ್ರತಿನಿಧಿಗಳು. ಈ ಸಂಘವು ಈ ಕೆಳಗಿನ ಪ್ರಕ್ರಿಯೆಗಳ ಮೂಲಕ ಕಾರ್ಯಾಚರಿಸುತ್ತದೆ:

- ಮೊದಲನೆಯದು ಸಾಮಾನ್ಯ ಸಭೆ. ಇದರಲ್ಲಿ ಆ ವ್ಯಾಪ್ತಿಗೆ ಬರುವ ಎಲ್ಲಾ ನೆರೆಹೊರೆ ಗುಂಪುಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಆರೋಗ್ಯ, ಆದಾಯೋತ್ಪನ್ನ ಮತ್ತು ಮೂಲಭೂತ ಸೌಕರ್ಯ ಕ್ಷೇತ್ರಗಳ ಸ್ವಯಂಸೇವಕರು ಭಾಗವಹಿಸುತ್ತಾರೆ.
- ಎರಡನೆಯದು ಆಡಳಿತ ಮಂಡಳಿ. ಅಂದರೆ, ಸಾಮಾನ್ಯ ಸಭೆಯಲ್ಲಿ ಚುನಾಯಿತವಾದ ಅಧ್ಯಕ್ಷೆ, ಕಾರ್ಯದರ್ಶಿ ಹಾಗೂ ಐವರ ಸದಸ್ಯರ ಮಂಡಳಿ.
- ಮೂರನೆಯದು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳೊಂದಿಗೆ ಸಂಬಂಧ. ಇಲ್ಲಿ ಗ್ರಾಮೀಣ ಪ್ರದೇಶಗಳ ಮಟ್ಟಿಗೆ ಹೇಳುವುದಾದರೆ ವಾರ್ಡಿನ ಪಂಚಾಯಿತಿ ಸದಸ್ಯರು ಈ ಸಂಘದ ಪ್ರಾಯೋಜಕರಾಗಿರುತ್ತಾರೆ.

**ಸಮುದಾಯ ಅಭಿವೃದ್ಧಿ ಸಂಘ**

ಸಿಡಿಎಸ್ ಎಂದು ಕರೆಯಲಾಗುವ ಈ ಸಂಘವು ಗ್ರಾಮೀಣವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇರುತ್ತದೆ. ಇದು ಕೂಡಾ ಮೂರು ಹಂತಗಳಲ್ಲಿ ಕಾರ್ಯಾಚರಿಸುತ್ತದೆ.

- ಮೊದಲನೆಯದು ಸಾಮಾನ್ಯ ಸಭೆ. ಇದಲ್ಲಿ ಎಲ್ಲಾ ಎಡಿಎಸ್‌ಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು, ಸಂಪನ್ಮೂಲ ವ್ಯಕ್ತಿಗಳ ಪ್ರತಿನಿಧಿಗಳು, ಬೇರೆ ಬೇರೆ ಬಡತನ ನಿರ್ಮೂಲನಾ ಮತ್ತು ಮಹಿಳಾ ಸಶಕ್ತೀಕರಣದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಹೊಣೆ ಹೊತ್ತಿರುವ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಇರುತ್ತಾರೆ.
- ಎರಡನೆಯದು ಆಡಳಿತ ಮಂಡಳಿ. ಇದರಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯ ಕಾರ್ಯದರ್ಶಿ ಹಾಗೂ ಚುನಾಯಿತ ಸದಸ್ಯರು ಇರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಪಂಚಾಯಿತಿಯಿಂದ ನೇಮಕವಾಗುವ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಬಡತನ ನಿರ್ಮೂಲನಾ ಕಾರ್ಯಕ್ರಮಗಳಲ್ಲಿ ತೊಡಗಿರುವ ಇತರ ಸರಕಾರಿ ಅಧಿಕಾರಿಗಳು ಪದನಿಮಿತ್ತ ಸದಸ್ಯರಾಗಿರುತ್ತಾರೆ.
- ಮೂರನೆಯದು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳೊಂದಿಗೆ ಸಂಬಂಧ. ಗ್ರಾಮ ಪಂಚಾಯಿತಿಯೊಂದರ ಅಧ್ಯಕ್ಷರು ಅಲ್ಲಿನ ಸಿಡಿಎಸ್‌ನ ಪ್ರಾಯೋಜಕರು. ಕಲ್ಯಾಣ ಸ್ಥಾಯಿ ಸಮಿತಿಯ ಅಧ್ಯಕ್ಷರು ಮತ್ತು ಆ ಪಂಚಾಯಿತಿಯ ಎಲ್ಲಾ ಮಹಿಳಾ ಸದಸ್ಯರು ಇದರ ಪದನಿಮಿತ್ತ ಸದಸ್ಯರು. ಇದು ತಾಲ್ಲೂಕು ಪಂಚಾಯಿತಿ ಸದಸ್ಯರಿಗೂ ಅನ್ವಯಿಸುತ್ತದೆ.

ಅಂದರೆ ತಳ ಮಟ್ಟದಲ್ಲಿ ಅಂದರೆ ಎನ್‌ಎಚ್‌ಜಿಯಲ್ಲಿ ಐವರು ಸ್ವಯಂಸೇವಕರ ತಂಡ, ಪ್ರದೇಶ ಮಟ್ಟದಲ್ಲಿ ಅಂದರೆ ಎಡಿಎಸ್‌ಗೆ ಏಳು ಸದಸ್ಯರ ನಾಯಕತ್ವ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಂದರೆ ಸಿಡಿಎಸ್‌ಗೆ ಒಂಭತ್ತು ಸದಸ್ಯರ ಆಡಳಿತ ಮಂಡಳಿ.

**ಸಿಡಿಎಸ್‌ನ ಪಾತ್ರ**

ಹಲವಾರು ಯೋಜನೆಗಳನ್ನು ಸಿಡಿಎಸ್ ಮೂಲಕ ಅನುಷ್ಠಾನಗೊಳಿಸುವ ಕ್ರಮ ಕೈಗೊಂಡಿರುವುದರಿಂದ ಸಿಡಿಎಸ್‌ಗಳು ತಮ್ಮ ಮಟ್ಟದಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವ ಪಾತ್ರ ವಹಿಸಬೇಕಾಗುತ್ತದೆ. ಇವುಗಳು ವಹಿಸಬೇಕಾದ ಇತರ ಮುಖ್ಯ ಪಾತ್ರಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು:

- ಬ್ಯಾಂಕ್ ಜೊತೆ ಲಿಂಕೇಜ್ ಮತ್ತು ಸಮನ್ವಯ
- ಮಾಹಿತಿಗಳನ್ನು ತಳ ಮಟ್ಟಕ್ಕೆ ತಲಪಿಸುವುದು
- ಸಮುದಾಯಾಧರಿತ ಸಂಘಟನೆಗಳನ್ನು ಬಲಪಡಿಸುವುದು
- ಆದಾಯೋತ್ಪನ್ನ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು
- ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಮೂಲಕ ನಡೆಯುವ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಡವರನ್ನು ಗುರುತಿಸುವಲ್ಲಿ ನೆರವು ನೀಡುವುದು
- ಸಮುದಾಯದ ಬೇಡಿಕೆಗಳು ಮತ್ತು ಅಭಿವೃದ್ಧಿಯ ನಡುವೆ ನಿರ್ಣಾಯಕ ಪಾತ್ರ ವಹಿಸುವುದು
- ನೆರೆಹೊರೆ ಸಮಿತಿಗಳ ನಾಯಕತ್ವ ವಹಿಸುವುದು

9 ನೇ ಪುಟಕ್ಕೆ

> ನಾಚುವ ವೈಫಲ್ಯವು ಅಹಂಕಾರಿ ಯಶಸ್ಸಿಗಿಂತ ಉತ್ತಮ
>
> - ಖಲೀಲ್ ಗಿಬ್ರಾನ್

# ಲಂಡನ್‌ನಲ್ಲಿ ತರಬೇತಿದಾರರ ತರಬೇತಿ: ಒಂದು ಅನುಭವ

ಲಂಡನ್‌ನಲ್ಲಿ 13 ಆಗಸ್ಟ್ 2007ರಿಂದ 23 ಆಗಸ್ಟ್ 2007ರ ತನಕ ಹತ್ತು ದಿನಗಳ ಕಾಲ ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಇಂಟರ್‌ನ್ಯಾಷನಲ್ ಸಂಸ್ಥೆಯಲ್ಲಿ ತರಬೇತಿದಾರರ ತರಬೇತಿ ಕಾರ್ಯಕ್ರಮವಿತ್ತು.

ಈ ಕಾರ್ಯಕ್ರಮಕ್ಕೆ ಭಾರತದ ವತಿಯಿಂದ ನವದೆಹಲಿಯ ಐಎಸ್‌ಟಿಎಂ ಸಂಸ್ಥೆಯಿಂದ ಶ್ರೀ ನಾರಾಯಣ ಮೂರ್ತಿಯವರನ್ನು ಹಾಗೂ ಆಡಳಿತ ತರಬೇತಿ ಸಂಸ್ಥೆಯಿಂದ ನನ್ನನ್ನು ನವದೆಹಲಿಯ ಡಿಓಪಿಟಿಯವರು ಆಯ್ಕೆ ಮಾಡಿದ್ದರು. ನನ್ನ ಆಯ್ಕೆಯನ್ನು ಸಿ. ಆ. ಸು. ಇಲಾಖೆ ಮತ್ತು ನಮ್ಮ ಸಂಸ್ಥೆಯ ಮಹಾನಿರ್ದೇಶಕರು ಅನುಮತಿಸಿ ನಿಯೋಜಿಸಿದ್ದರು.

ಈ ತರಬೇತಿಯಲ್ಲಿ ಘಾನಾದಿಂದ ಶ್ರೀಮತಿ ಎಲಿಜಬೆತ್ ಮೈಲ್‌ಡ್ರೆಡ್ ಒಫೋರಿ ಮತ್ತು ಶ್ರೀ ಕಾನ್ಫಿಡೆನ್ಸ್ ಹೈಗ್ಸ್, ನೈಜೀರಿಯಾದಿಂದ ಶ್ರೀ ಮಹಮ್ಮದ್ ಲಾವಲ್ ಉಮರ್ ಮತ್ತು ಶ್ರೀ ಸಾನಿ ಸಾಹಿದ್ ಖಿಜೂರೆ, ಪಾಕಿಸ್ತಾನದಿಂದ ಶ್ರೀ ರಾಣಾ ಉಮರ್, ಜಾಂಬಿಯಾದಿಂದ ಶ್ರೀ ಸುನಾನ್ ಡಿ. ನುಗಮ್ ಭಾಗವಹಿಸಿದ್ದರು. ಈ ತರಬೇತಿಯಲ್ಲಿ ಶ್ರೀಮತಿ ಎಲ್ಲಿನಾರ್ ತರಬೇತಿ ನಿದೇರ್ಶಕರಾಗಿದ್ದು, ಶ್ರೀ ಪೀಟರ್ ಕೆರ್ಸ್‌ವೆಲ್ ಹಾಗೂ ಶ್ರೀಮತಿ ಅನ್ನೀ ಹಾಲ್ ಅವರು ಅಧ್ಯಯನ ನಿರ್ದೇಶಕರಾಗಿ ಹಾಗೂ ತರಬೇತಿಯ ಅವಧಿಯಲ್ಲಿ ಹೆಚ್ಚಿನ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಿದರು.

ಈ ತರಬೇತಿದಾರರ ತರಬೇತಿಯಲ್ಲಿ ಉತ್ತಮ ಹಾಗೂ ಕ್ರಮಬದ್ಧ ತರಬೇತಿಯ ಕುರಿತು ಪೂರ್ಣಾವಲೋಕನ ಮಾಡಿದ್ದು, ತರಬೇತಿಯ ಎಲ್ಲಾ ಅಂಶಗಳ ಬಗ್ಗೆ ವ್ಯಾಪಕವಾಗಿ ತಿಳಿಸಲಾಯಿತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

- ✦ ಸರಾಗ ಸಂವಾದ
- ✦ ಕಾರ್ಯನಿರ್ವಹಣೆಯ ಅಗತ್ಯವನ್ನು ಗುರುತಿಸುವುದು ಮತ್ತು ವಿಶ್ಲೇಷಿಸುವುದು

ತರಬೇತಿಯ ಉದ್ದೇಶಗಳು

- ✦ ಪ್ರಶಿಕ್ಷಣಾರ್ಥಿಯು ತರಬೇತಿ ಪೂರ್ವದಲ್ಲಿ ಹೊಂದಿರುವ ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ತರಬೇತಿ ಪೂರ್ವ ವರ್ತನೆ (Entry behavior)ಯಿಂದ ಗುರುತಿಸುವುದು ಹೇಗೆಂಬುದನ್ನು ತಿಳಿದುಕೊಳ್ಳುವುದು ಮತ್ತು ಈ ರೀತಿ ತಿಳಿದುಕೊಂಡಲ್ಲಿ ಎಲ್ಲಿಂದ ತರಬೇತಿ ಆರಂಭಿಸಬೇಕು ಮತ್ತು ತರಬೇತಿಯ ಅವಧಿ ಎಷ್ಟಿರಬೇಕು ಎಂಬುದನ್ನು ನಿರ್ಧರಿಸುವುದು. ಈ ಮೂಲಕ ಅವರು ಹೊಂದಿರುವ ಜ್ಞಾನ, ಕುಶಲತೆ, ಹಾಗೂ ಮನೋಭಾವಗಳನ್ನು ತಿಳಿದುಕೊಂಡು ಅದಕ್ಕೆ ಅನುಗುಣವಾಗಿ ತರಬೇತಿಯನ್ನು ರೂಪಿಸುವುದು.
- ✦ ತರಬೇತಿಯ ವಿಧಗಳು ಹಾಗೂ ಯೋಜನೆಗಳನ್ನು ತಿಳಿದುಕೊಳ್ಳುವುದು
- ✦ ಸಂವಾದದ ಕೌಶಲಗಳು ಮತ್ತು ತಂತ್ರಗಳು
- ✦ ತರಬೇತಿಯ ಸಾಧನಗಳು, ಅಂದರೆ ಫ್ಲಿಪ್‌ಚಾರ್ಟ್, ಪವರ್ ಪಾಯಿಂಟ್ ಹಾಗೂ ಇನ್ನಿತರ ದೃಶ್ಯ-ಶ್ರವ್ಯ ಮಾಧ್ಯಮಗಳನ್ನು ತರಬೇತಿಯಲ್ಲಿ ಬಳಸುವ ಬಗೆಯನ್ನು ತಿಳಿದುಕೊಳ್ಳುವುದು. ಇವುಗಳ ಅನುಕೂಲಗಳು ಮತ್ತು ಅನಾನುಕೂಲಗಳನ್ನು ತಿಳಿದುಕೊಳ್ಳುವುದು.

ತರಬೇತಿಯ ವೇಳೆಯಲ್ಲಿ ಶ್ರೀ ಡೇವಿಡ್ ಚಿವರ್ಸ್ ಅವರು ಮನಸ್ಸಿನ ಹಾಗೂ ಬೌದ್ಧಿಕ ಸಾಮರ್ಥ್ಯದ ಪಡದ ಕುರಿತು ವಿವರಿಸಿ, ಯಾವುದೇ ವಿಷಯವನ್ನು ತರಬೇತಿದಾರರು ಮಂಡನೆ ಮಾಡುವಾಗ ಎಲ್ಲಿಂದ ಪ್ರಾರಂಭಿಸಬೇಕು, ಹೇಗೆ ಮುಗಿಸಬೇಕು, ಆರಂಭ ಮತ್ತು ಮುಕ್ತಾಯದ ನಡುವೆ ನಮಗಿರುವ ಕಾಲಾವಕಾಶದ ನಡುವೆ ನಮಗೆ ಹೇಳಬೇಕಾದ ಅತೀ ಮುಖ್ಯವಿಷಯಗಳನ್ನು ಹೇಗೆ ಆದ್ಯತೆಯ ಮೇರೆಗೆ ಒತ್ತು ನೀಡಿ ಮಂಡನೆ ಮಾಡಬೇಕು ಎಂದು ತಿಳಿಸಿದರು.

ಅವರು ಹೇಳುವ ಪ್ರಕಾರ, ತರಬೇತಿ ಸಾಧನಗಳಲ್ಲಿ ದೃಶ್ಯ ಸಾಧನಗಳು ಶ್ರವ್ಯ ಅಥವಾ ಮೌಖಿಕ ಸಾಧನಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಇದನ್ನು ಮಾಪನ ಮಾಡಿದರೆ ದೃಶ್ಯ ಸಾಧನಗಳ ಪರಿಣಾಮ 55 ಶೇಕಡಾ ಆಗಿದ್ದರೆ, ಮೌಖಿಕ ಸಾಧನಗಳ ಪರಿಣಾಮ ಕೇವಲ ಏಳು ಶೇಕಡಾ ಮಾತ್ರ.

ತರಬೇತಿದಾರರು ತರಬೇತಿ ನೀಡುವಾಗ ಪ್ರಶಿಕ್ಷಣಾರ್ಥಿಗಳು ಕ್ರಿಯಾತ್ಮಕ ಚಿಂತನೆ (Creative thinking) ಮಾಡುವಂತೆ ಮತ್ತು ಅದನ್ನು ಉಪಯೋಗಿಸುವಂತೆ ಪ್ರೇರೇಪಿಸಬೇಕು ಎಂದು ಸೂಚಿಸಲಾಯಿತು. ತರಬೇತಿ ಕೊಠಡಿಯಲ್ಲಿರುವ ಪರಿಕರಗಳನ್ನೇ ಅವರ ಕ್ರಿಯಾತ್ಮಕ ಚಿಂತನೆಯ ಅಭಿವೃದ್ಧಿಗೆ ಬಳಸುವಂತೆ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಲಾಯಿತು.

ಇದಲ್ಲದೇ ಬೇರೆ ಬೇರೆ ತರಬೇತಿದಾರರ ಗ್ರಹಿಸುವಿಕೆಯ ಶೈಲಿಯ ಬಗ್ಗೆಯೂ ಈ ತರಬೇತಿಯಲ್ಲಿ ತಿಳಿಸಲಾಯಿತು.

ಈ ತರಬೇತಿಯು ತರಬೇತಿದಾರರಿಗೆ ಮುಂದೆ ಬೇರೆಯವರಿಗೆ ತರಬೇತಿ ನೀಡುವ ಸಂದರ್ಭದಲ್ಲಿ ತುಂಬಾ ಅನುಕೂಲಕರವಾಗಿದ್ದು, ತರಬೇತಿಯ ಅವಧಿಯಲ್ಲಿ ಘಟನಾ ಅಧ್ಯಯನ ಕೂಡಾ ಮಾಡಿಸಲಾಗಿದೆ. ಇದು ತುಂಬಾ ಉಪಯುಕ್ತವಾಗಿದ್ದು, ಈ ಕುರಿತು ಮುಂದಿನ ಸಂಚಿಕೆಯಲ್ಲಿ ತಿಳಿದುಕೊಳ್ಳೋಣ.

- ಎಂ. ಶ್ರೀದೇವಿ,
ಬೋಧಕರು, ಆಡಳಿತ ತರಬೇತಿ ಸಂಸ್ಥೆ.

# ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಅಪರ ಕಾರ್ಯದರ್ಶಿ ಭೇಟಿ

ರಾಜ್ಯದ ನಗರಾಭಿವೃದ್ಧಿ ಅಪರ ಕಾರ್ಯದರ್ಶಿ ಶ್ರೀ ಎಸ್. ಎಂ. ಆಚಾರ್ಯ ಅವರು ಇತ್ತೀಚೆಗೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಭೇಟಿ ನೀಡಿದರು. ಅವರು ಇಲ್ಲಿನ ಸಭಾಂಗಣದಲ್ಲಿ ಜವಾಹರ್‌ಲಾಲ್ ನೆಹರೂ ರಾಷ್ಟ್ರೀಯ ನಗರ ಪುನರುತ್ಥಾನ ಅಭಿಯಾನ (ಜೆಎನ್‌ಎನ್‌ಯುಆರ್‌ಎಂ)ದ ಕುರಿತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಮೈಸೂರು ಮಹಾನಗರ ಪಾಲಿಕೆಯ ಅಧಿಕಾರಿಗಳೊಡನೆ ಚರ್ಚೆ ನಡೆಸಿದರು. ಈ ಯೋಜನೆಯಲ್ಲಿ ಆರಂಭಿಸಲಾದ ಯೋಜನೆ ಗಳನ್ನು ತ್ವರಿತವಾಗಿ ಕಾರ್ಯಗತ ಗೊಳಿಸುವಂತೆ ಅವರು ಸೂಚನೆಗಳನ್ನು ನೀಡಿದರು.

ಈ ಅಭಿಯಾನದಲ್ಲಿ ನೀರು ಪೂರೈಕೆ ವ್ಯವಸ್ಥೆಯ ನವೀಕರಣಕ್ಕಾಗಿ ಕೇಂದ್ರ ಸರ್ಕಾರವು 194.54 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಬಸ್ ತ್ವರಿತ ಸಾರಿಗೆ ವ್ಯವಸ್ಥೆ (ಬಸ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಮ್, ಬಿಆರ್‌ಟಿಎಸ್)ಗೆ 83 ಕೋಟಿ ರೂ.ಗಳನ್ನು, ಸ್ಲಂ ಅಭಿವೃದ್ಧಿಗೆ 45 ಕೋಟಿ ರೂ.ಗಳನ್ನು ಹಾಗೂ ಇತರ ಮೂರು ಯೋಜನೆಗಳ ಪ್ರಥಮ ಹಂತದ ಅನುದಾನವಾಗಿ 35.99 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

> ಹುಚ್ಚರ ರಾಜ್ಯದಲ್ಲಿ ಸರಿ ಇರುವವರೇ ಹುಚ್ಚರೆನಿಸುತ್ತಾರೆ
>
> - ಖಲೀಲ್ ಗಿಬ್ರಾನ್

# ನಿಮ್ಮ ಪ್ರಶ್ನೆ ನಮ್ಮ ಉತ್ತರ

ಈ ಅಂಕಣದಲ್ಲಿ ಸರಕಾರಿ ನೌಕರರು ಮತ್ತು ಸಾರ್ವಜನಿಕರು ಆಡಳಿತದಲ್ಲಿ ಎದುರಾಗುವ ಸಮಸ್ಯೆಗಳು, ನಿಯಮಗಳ ಕುರಿತ ಸಂಶಯ, ಗೊಂದಲಗಳು ಇತ್ಯಾದಿಗಳ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ಈ ಪ್ರಶ್ನೆಗಳಿಗೆ ತಜ್ಞರು ಸೂಕ್ತ ಉತ್ತರ ನೀಡುತ್ತಾರೆ. ಓದುಗರು ಇದರ ಸದುಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ. ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ:

ಸಂಪಾದಕರು, ಪರಿವರ್ತನೆಗಾಗಿ ಪ್ರಶಿಕ್ಷಣ, ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು-11.

ಇ- ಮೇಲ್: parivartha@yahoo.co.in

ರಾಜ್ಯದ ಹಿಂದುಳಿದ ತಾಲ್ಲೂಕುಗಳಲ್ಲಿ ಜಾರಿಯಲ್ಲಿರುವ 'ಗ್ರಾಮ ಸ್ವರಾಜ್' ಯೋಜನೆಯ ಮೂಲ ಉದ್ದೇಶಗಳೇನು?

✦ ಮೊದಲ ಉದ್ದೇಶವೆಂದರೆ ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಶಕ್ತಿ ಪಡೆಯಬೇಕು. ಅದಲ್ಲದೇ ಜನರಿಗೆ ಮತ್ತು ಊರಿನ ಅಭಿವೃದ್ಧಿಗೆ ಬೇಕಾಗಿರುವ ಕೆಲಸಗಳನ್ನು ಮಾಡಲು ಸಾಧ್ಯವಾಗಬೇಕು.

✦ ಸ್ಥಳೀಯ ಸರ್ಕಾರಗಳುಎಲ್ಲಾ ವಿಷಯಗಳಿಗೂ ಸರ್ಕಾರವನ್ನೇ ಕಾಯದೆ, ಸ್ವಂತವಾದ ಸಂಪನ್ಮೂಲ ಅಭಿವೃದ್ಧಿಗೆ ಸುಧಾರಿತ ಕ್ರಮಗಳನ್ನು ಕೈಗೊಳ್ಳಬೇಕು. ಸರಿಯಾದ ತೆರಿಗೆ ಮತ್ತು ಸೇವಾ ಶುಲ್ಕಗಳ ನಿರ್ಧಾರ, ಸರಿಯಾದ ಸಮಯಕ್ಕೆ ವಸೂಲಿ, ಅಕ್ರಮಗಳ ತೆರವು ಇತ್ಯಾದಿಯಾಗಿ ದಿಟ್ಟ ನಿರ್ಧಾರಗಳು, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಸೇವೆಗಳ ಪೂರೈಕೆಯು ಸಮರ್ಪಕವಾಗುವಂತೆ ನೋಡಿಕೊಳ್ಳುವುದು ಇತ್ಯಾದಿ ವಿಷಯಗಳನ್ನು ಅವಲಂಬಿಸಿದೆ.

✦ ಈ ಹಿನ್ನೆಲೆಯಲ್ಲಿ ಮೇಲೆ ಹೇಳಿದಂತೆ ರಾಜ್ಯದ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ 1343 ಗ್ರಾಮ ಪಂಚಾಯಿತಿಗಳಿಗೆ ವಿಶೇಷವಾಗಿ ಮುಕ್ತ ಅನುದಾನ ದೊರೆಯುತ್ತಿದೆ. ಈ ಪಂಚಾಯಿತಿಗಳಿಗೆ ಮುಕ್ತ ಅನುದಾನ ನೀಡಲಾಗುತ್ತಿದೆ.

✦ ಈ ಯೋಜನೆಯ ಇನ್ನೊಂದು ಉದ್ದೇಶವೆಂದರೆ, ಸಮುದಾಯಕ್ಕೆ ಒದಗಿಸಲೇ ಬೇಕಾಗಿರುವ ಸೇವೆಗಳ ಪೂರೈಕೆಯಲ್ಲಿ ಸುಧಾರಣೆ ಮಾಡುವುದು. ಸೇವೆಗಳ ಪೂರೈಕೆಯಲ್ಲಿ ಸುಧಾರಣೆ ತರುವ ಪ್ರಯತ್ನವನ್ನು ಕೇವಲ 39 ಅತ್ಯಂತ ಹಿಂದುಳಿದ ತಾಲೂಕುಗಳಿಗೆ ಸೀಮಿತ ಮಾಡಿಲ್ಲ. ಇದನ್ನು ಇಡೀ ರಾಜ್ಯಕ್ಕೆ ಅಳವಡಿಸಲಾಗಿದೆ. ಇದನ್ನು ಸಾಧಿಸಲು ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಅನೇಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

'ಗ್ರಾಮ ಸ್ವರಾಜ್' ಯೋಜನೆಯ ಉದ್ದೇಶಿತ ಪರಿಣಾಮಗಳು ಏನು?

✦ ಮೊದಲನೆಯದಾಗಿ ಸ್ಥಳೀಯ ಆವಶ್ಯಕತೆಗಳಿಗೆ ಅನುಗುಣವಾಗಿ ಮುಕ್ತ ಅನುದಾನಗಳ ಹಂಚಿಕೆ ಮತ್ತು ಬಳಕೆ ಸರಿಯಾಗಿ ನಡೆಯುವಂತೆ ಮಾಡುವುದು.

✦ ಗ್ರಾಮ ಪಂಚಾಯಿತಿಯು ಸ್ವಂತವಾಗಿ ಹಣಕಾಸನ್ನು ಒಟ್ಟು ಮಾಡಲು ಶಕ್ತವಾಗುವಂತೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಸುಧಾರಣೆಯನ್ನು ತೋರುವಂತೆ ಮಾಡುವುದು.

✦ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಂಪನ್ಮೂಲಗಳು ಮತ್ತುಅಗತ್ಯ ಸೇವೆಗಳ ಸೇವೆಯಲ್ಲಿ ಸುಧಾರಣೆಯಾಗುವಂತೆ ಮಾಡುವುದು. ಅಂದರೆ ಗ್ರಾಮೀಣ ಕುಡಿಯುವ ನೀರು, ಪ್ರಾಥಮಿಕ ಶಿಕ್ಷಣ, ವಯಸ್ಕರ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಪಡಿತರ ವಿತರಣೆ ಇತ್ಯಾದಿ ಸೇವೆಗಳಿಗೆ ಸಂಬಂಧಿಸಿ ಸುಧಾರಣೆಗೆ ಯೋಜನೆ ರೂಪಿಸುವುದು. ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಜನರು ಪಾಲುಗೊಳ್ಳುವಂತೆ ಮಾಡುವುದು. ಸಮುದಾಯ ಹಾಗೂ ಎಲ್ಲಾ ಚುನಾಯಿತ ಜನಪ್ರತಿನಿಧಿಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.

✦ ಎಲ್ಲಾ ಪಂಚಾಯಿತಿಗಳಲ್ಲಿ ಲೆಕ್ಕ ಪತ್ರಗಳನ್ನು ಕಂಪ್ಯೂಟರೀಕರಣ ಗೊಳಿಸುವುದು. ಇದರಿಂದ ಪಾರದರ್ಶಕತೆ ಮತ್ತು ಆಡಳಿತ ಸುಧಾರಣೆಯನ್ನು ಸಾಧಿಸಲು ಸಾಧ್ಯ.

## 'ಕುಟುಂಬಶ್ರೀ'

7 ನೇ ಪುಟದಿಂದ

✦ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಯೋಜನೆಯಲ್ಲಿ ಮಧ್ಯಪ್ರವೇಶ ಮಾಡುವುದು. ಎಂದರೆ ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಉಪ ಯೋಜನೆಗಳು, ಮಹಿಳಾ ಸಶಕ್ತೀಕರಣ ಅಂಶಗಳು, ಸ್ಥಳೀಯ ಅಭಿವೃದ್ಧಿಯ ಅಂಶಗಳು.

✦ ಕಾನೂನು ಸಾಕ್ಷರತೆ

✦ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳಿಗೆ ಅವಕಾಶಗಳನ್ನು ಕಲ್ಪಿಸುವುದು.

ರಾಜ್ಯ ಮಟ್ಟದಲ್ಲಿ ಒಂದು ಆಡಳಿತ ಸಮಿತಿಯನ್ನು ರಚಿಸಲಾಗಿದೆ. ರಾಜ್ಯ ಅಭಿಯಾನ ಕಚೇರಿಯನ್ನೂ ತೆರೆಯಲಾಗಿದೆ. ಜಿಲ್ಲಾ ಮಟ್ಟದಲ್ಲಿಯೂ 'ಕುಟುಂಬಶ್ರೀ' ಅಭಿಯಾನ ಕಚೇರಿಗಳಿವೆ. ಇವು ಈ ಯೋಜನೆಯ ಚಟುವಟಿಕೆಗಳನ್ನು ಸಮನ್ವಯಗೊಳಿಸುತ್ತವೆ.

ಈ ಯೋಜನೆಯಲ್ಲಿ ಕೇರಳದ ಬಡವರಿಗಾಗಿ ಹಲವಾರು ವಿನೂತನ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಅವುಗಳ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

## ಪ್ರತಿಕ್ರಿಯೆ

### ಉಪಯುಕ್ತವಾಗಿದೆ

ಮಾನ್ಯರೇ,

ತಮ್ಮ ಸಂಸ್ಥೆಯಿಂದ ಪ್ರಕಾಶಿತವಾಗುತ್ತಿರುವ 'ಪರಿವರ್ತನೆಗಾಗಿ ಪ್ರಶಿಕ್ಷಣ'

ವಾರ್ತಾಪತ್ರವು ಒಳ್ಳೊಳ್ಳೆಯ ಮಾಹಿತಿಗಳನ್ನೊಳಗೊಂಡಿದ್ದು, ಬಹಳ ಉಪಯುಕ್ತವಾಗಿದೆ. ಆದುದರಿಂದ ಪತ್ರಿಕೆಯನ್ನು ನಮ್ಮ ಕಾರ್ಯಾಲಯಕ್ಕೂ ಕಳುಹಿಸಿಕೊಡಬೇಕೆಂದು ವಿನಂತಿ.

-ಜಿಲ್ಲಾ ಶಸ್ತ್ರ ಚಿಕಿತ್ಸಕರು,
ಜಿಲ್ಲಾ ಆಸ್ಪತ್ರೆ, ರಾಯಚೂರು.

### ನಮಗೂ ಕಳುಹಿಸಿ ಕೊಡಿ

ಮಾನ್ಯರೇ,

ಹುಕ್ಕೇರಿಯಲ್ಲಿ ನಮ್ಮ 'ಸೃಷ್ಟಿ ರೂರಲ್ ಡೆವಲಪ್‌ಮೆಂಟ್ ಸೊಸೈಟಿ' ಎಂಬ ಸರಕಾರೇತರ ಸಂಸ್ಥೆ ಇದೆ. ಇದರಿಂದ ಹಲವಾರು ಒಳ್ಳೆಯ ಸಾಮಾಜಿಕ ಕಾರ್ಯಚಟುವಟಿಕೆಗಳನ್ನು ಮಾಡುತ್ತಿದ್ದೇವೆ. ಆದ್ದರಿಂದ ನಮಗೆ 'ಪರಿವರ್ತನೆಗಾಗಿ ಪ್ರಶಿಕ್ಷಣ' ಪತ್ರಿಕೆಯನ್ನು ಕಳುಹಿಸಿಕೊಡಲು ತಮ್ಮಲ್ಲಿ ಕೋರಿಕೊಳ್ಳುತ್ತೇವೆ.

**- ನಂದ ಕಿಶೋರ್ ಗೌಡರ್,**
ಅಧ್ಯಕ್ಷರು, ಸೃಷ್ಟಿ ರೂರಲ್ ಡೆವಲಪ್‌ಮೆಂಟ್ ಸೊಸೈಟಿ,
ಬಡಿಗೇರ ಲೇನ್, ಹುಕ್ಕೇರಿ -591 309
ಬೆಳಗಾವಿ ಜಿಲ್ಲೆ.

### ತಿದ್ದುಪಡಿ

ಕಳೆದ ಸಂಚಿಕೆಯ ಮುಖಪುಟದಲ್ಲಿ 'ಅಕ್ಟೋಬರ್' ತಿಂಗಳ ಸಂಚಿಕೆ ಎಂದು ನಮೂದಿಸಲಾಗಿದ್ದರೂ, ಒಳಗಿನ ಪುಟಗಳಲ್ಲಿ 'ಸೆಪ್ಟೆಂಬರ್' ಎಂಬುದು ಕಣ್ತಪ್ಪಿನಿಂದ ಉಳಿದುಕೊಂಡಿತ್ತು. ಪ್ರಮಾದಕ್ಕಾಗಿ ವಿಷಾದಿಸುತ್ತೇವೆ.

- ಸಂ.

ಕಪ್ಪೆಗಳು ಎತ್ತುಗಳಿಗಿಂತ ಜೋರಾಗಿ ಗುಟುರು ಹಾಕಬಹುದು. ಆದರೆ ಅವು ಗದ್ದೆಗಳನ್ನು ಉಳಲಾರವು

- ಖಲೀಲ್ ಗಿಬ್ರಾನ್

# ರಾಜ, ಪ್ರಭುತ್ವ, ಪ್ರಜೆಗಳು ಮತ್ತು ಪ್ರಜಾಪ್ರಭುತ್ವ

ಪ್ರಿಯರೇ,

ನಾನೋದಿದ ಕಥೆಯೊಂದು ಇಲ್ಲಿದೆ. ಒಂದೂರಿನಲ್ಲಿ ಒಬ್ಬ ರಾಜನಿದ್ದ. ಒಂದು ದಿನ ಅವನ ಪ್ರಜೆಗಳು ಅವನ ವಿರುದ್ಧ ಬಂಡಾಯವೆದ್ದು, ಘೋಷಣೆಗಳನ್ನು ಕೂಗುತ್ತಾ ಅರಮನೆಯ ಸುತ್ತ ನೆರೆದರು. ಅವನು ಒಂದು ಕೈಯಲ್ಲಿ ಕಿರೀಟವನ್ನೂ ಇನ್ನೊಂದು ಕೈಯಲ್ಲಿ ಅಧಿಕಾರದ ದಂಡವನ್ನೂ ಹಿಡಿದುಕೊಂಡು ವಿನೀತನಾಗಿ ಮೆಟ್ಟಿಲಿಳಿದು ಬಂದ. ಜನರು ಮೌನವಾದರು.ಅವನು ಅವರ ಮುಂದೆ ಬಂದು ಹೀಗೆ ಹೇಳಿದ 'ನಾನು ನಿಮಗೆ ಈ ಕಿರೀಟ ಮತ್ತು ಅಧಿಕಾರ ದಂಡವನ್ನು ಒಪ್ಪಿಸುತ್ತಿದ್ದೇನೆ. ನಾನು ನಿಮ್ಮ ರಾಜನಲ್ಲ, ನೀವು ನನ್ನ ಪ್ರಜೆಗಳಲ್ಲ. ನಾನು ನಿಮ್ಮಂತೆಯೇ ಒಬ್ಬ ಮನುಷ್ಯ. ಈಗ ರಾಜನ ಅಗತ್ಯವಿಲ್ಲ. ಬನ್ನಿ ಹೋಗಿ ದುಡಿಯೋಣ. ಆದರೆ ನೀವೇ ಹೇಳಬೇಕು, ನಾನು ಯಾವ ಹೊಲದಲ್ಲಿ ದುಡಿಯಬೇಕು ಎಂದು. ಏಕೆಂದರೆ ಈಗ ನೀವೇ ರಾಜರು!'

ಜನರು ಸ್ತಂಭೀಭೂತರಾದರು. ಯಾವ ರಾಜನ ವಿರುದ್ಧ ಅವರು ಹೋರಾಡಲು ಹೊರಟಿದ್ದರೋ, ಆ ರಾಜನೇ ಎಲ್ಲವನ್ನು ಬಿಟ್ಟುಕೊಟ್ಟಿದ್ದ! ಜನರು ಅವನೊಂದಿಗೆ ಗದ್ದೆಗಳಿಗೆ ನಡೆದರು.

ಆದರೆ ಆಡಳಿತವಿಲ್ಲದೇ ಆ ರಾಜ್ಯದಲ್ಲಿ ಏನೂ ನಡೆಯಲಿಲ್ಲ. ಅದೇ ಅಸಮಾಧಾನ, ಅದೇ ಕೋಪ. ಆಡಳಿತವೆಂಬುದು ಬೇಕೇಬೇಕು ಎಂದು ಜನರು ನಿರ್ಧರಿಸಿ ಮತ್ತೆ ಆ ಪದಚ್ಯುತ ರಾಜನ ಬಳಿಗೆ ಹೋದರು. ಅವನು ತನ್ನ ಕಾರ್ಯಕ್ಷೇತ್ರದಲ್ಲಿ ತತ್ಪರತೆಯಿಂದ ಬೆವರಿಳಿಸುತ್ತಿದ್ದ. ಆಗ ಜನರು ಅವನಿಗೆ ಅವನ ಕಿರೀಟ ಮತ್ತು ಆಡಳಿತ ದಂಡವನ್ನು ಮರಳಿ ಕೊಟ್ಟರು. 'ನೀನು ನಿಷ್ಠುರತೆಯಿಂದ ಮತ್ತು ನ್ಯಾಯಬದ್ಧವಾಗಿ ಆಳಬೇಕು' ಎಂದರು.

ಹಾಗೆಯೇ ಆಗಲಿ ಎಂದ ರಾಜ. ಅವನ ಬಳಿಗೆ ಅನ್ಯಾಯವಾಗಿದ್ದ ಒಬ್ಬೊಬ್ಬ ಪ್ರಜೆಯೂ ಬಂದರು. ಅವರಿಗೆ ಜಮೀನ್ದಾರರು, ದರೋಡೆಕೋರರು, ಅಧಿಕಾರಿಗಳು, ದೇವತಾಮನುಷ್ಯರು, ಕಳ್ಳರು... ಇತ್ಯಾದಿಯಾಗಿ ಎಲ್ಲರ ಬಗ್ಗೆ ದೂರಿದ್ದಿತು. ರಾಜನು ಅವರನ್ನು ವಿಚಾರಿಸಿ ರಾಜ್ಯದಿಂದ ಹೊರಗೆ ಹಾಕಿದ. ಜನರು ಹಸಿವಿನಿಂದಿರುವಾಗ ಆರಾಮ ಮಾಡುವ ಎಲ್ಲರ ವಿರುದ್ಧ ಅವನು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡ. ಜನರು ಅವನನ್ನು ಬೆಂಬಲಿಸಿದರು.

ಮತ್ತೊಂದು ದಿನ, ಐದು ವರ್ಷಗಳ ಹಿಂದೆ ಪ್ರತಿಭಟನೆ ನಡೆಸಿದ ಜನರೇ ಮತ್ತೆ ಅರಮನೆಯನ್ನು ಸುತ್ತುವರಿದರು. ರಾಜ ಹಿಂದಿನಂತೆಯೇ ಒಂದು ಕೈಯಲ್ಲಿ ಕಿರೀಟ, ಇನ್ನೊಂದು ಕೈಯಲ್ಲಿ ಅಧಿಕಾರ ದಂಡ ಹಿಡಿದುಕೊಂಡು ಮೆಟ್ಟಿಲಿಳಿದುಬಂದ. ಅವನು ಹೇಳಿದ, 'ಐದು ವರ್ಷಗಳ ಹಿಂದೆ ನೀವು ಕೊಟ್ಟಿರುವುದನ್ನು ಹಿಂದೆ ಕೊಡುತ್ತೇನೆ.' ಆಗ ಜನ ಬೇಡ, ಬೇಡ ಅಂದರು. 'ನೀನೇ ರಾಜ' ಎಂದು ಅವರು ಚೀರಿದರು.

ರಾಜನೆಂದ, 'ನಾನು ರಾಜನಲ್ಲ, ನೀವೇ ರಾಜರು. ನಾನು ದುರ್ಬಲ, ಅದಕ್ಕೆ ಎಂದು ನೀವು ಭಾವಿಸಿದ್ದಾಗ ನೀವೇ ಸ್ವತಃ ದುರ್ಬಲರೂ ಅದಕ್ಷರೂ ಆಗಿದ್ದಿರಿ. ಈಗ ನಾವು ಒಳ್ಳೆಯ ಸಾಧನೆ ಮಾಡುತ್ತಿದ್ದೇವೆ, ಏಕೆಂದರೆ ನೀವೇ ಒಳ್ಳೆಯ ಸಾಧನೆ ಮಾಡುತ್ತಿದ್ದೀರಿ. ನಾನು ನಿಮ್ಮ ಮನಸ್ಸಿನ ಒಂದು ಚಿಂತನೆ ಮಾತ್ರ. ನಾನು ನಿಮ್ಮ ಹೊರತು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ನಾನು ನಿಮ್ಮ ದುಡಿಮೆಯ ಫಲವಾಗಿಯೇ ಅಸ್ತಿತ್ವದಲ್ಲಿದ್ದೇನೆ. ಹಾಗೆ ನೋಡಿದರೆ ಆಳುವವರು ಯಾರೂ ಇಲ್ಲ. ಆಳಿಸಿಕೊಳ್ಳುವವರು ಮಾತ್ರ ಅಸ್ತಿತ್ವದಲ್ಲಿರುತ್ತಾರೆ ಮತ್ತು ಅವರು ತಮ್ಮನ್ನೇ ಆಳುತ್ತಾರೆ.'

ಪ್ರತೀ ಪ್ರಜೆಯೂ ಮನೆಗೆ ಮರಳಿದ ತನ್ನ ಮನಸ್ಸಿನಲ್ಲಿಯೇ ಒಂದು ಕೈಯಲ್ಲಿ ಕಿರೀಟ ಹಾಗೂ ಮತ್ತೊಂದು ಕೈಯಲ್ಲಿ ಅಧಿಕಾರದ ದಂಡ ಹಿಡಿದುಕೊಂಡಂತೆಯೇ. ಆ ದೇಶ ಸಮೃದ್ಧಿ ಹೊಂದಿತು.

ಈ ಕಥೆಯಲ್ಲಿ ದೇಶದ ಪ್ರಜೆಯಾಗಿ, ಆಡಳಿತಗಾರರಾಗಿ, ಸಿಬ್ಬಂದಿಯಾಗಿ ಹಾಗೂ ಇನ್ನೂ ಅನೇಕ ಪಾತ್ರಗಳಲ್ಲಿ ನಾವು ಕಲಿಯಬಹುದಾದುದೇನು ಎಂಬುದನ್ನು ನಾವೇ ಯೋಚಿಸೋಣ.

- ನಿಖಿಲ್ ಕೋಲ್ಪೆ, ಸಂಪಾದಕ.

# ರೈತರ ಬೆಳೆಗಳಿಗೆ ಮಾರುಕಟ್ಟೆ ಒದಗಿಸುವುದು ಅತ್ಯಗತ್ಯ

3 ನೇ ಪುಟದಿಂದ

ದಾಳಿಂಬೆಯನ್ನು ಕೇಳುವವರೇ ಇಲ್ಲದ ಸ್ಥಿತಿಯ ಪರಿಣಾಮವಾಗಿರಬಹುದೇ? ಹಾಳಾಗುವ ಬದಲು ಈ ಪರಊರಿನವನಾದರೂ ತಿನ್ನಲಿ ಎಂಬ ಚಿಂತನೆಯಾಗಿರಬಹುದೆ?

ದಾರಿಯುದ್ದಕ್ಕೂ ದಾಳಿಂಬೆ ಮತ್ತು ಸೀಬೆ ತೋಟಗಳು ರಾರಾಜಿಸುತ್ತಿದ್ದವು. ನಾವು ಬೇರೆ ಬೇರೆ ರುಚಿಯ ದಾಳಿಂಬೆ ಹಣ್ಣುಗಳನ್ನು ತಿನ್ನುತ್ತಾ ಹೋಗುತ್ತಿದ್ದಂತೆಯೇ ಕೆಲವು ಯೋಚನೆಗಳು ಹೊಳೆದವು. ಮೈಸೂರು, ಬೆಂಗಳೂರು ಮುಂತಾದ ನಗರಗಳಲ್ಲಿ ದಾಳಿಂಬೆಗೆ ದುಬಾರಿ ಬೆಲೆ ಇರುವಾಗ, ಬೇರೆ ಹಲವಾರು ಜಿಲ್ಲೆಗಳ ಜನರು ಅದನ್ನು ತಿನ್ನಲು ಆಸೆ ಪಡುತ್ತಿರುವಾಗ, ಇದು ರಫ್ತು ಕೂಡಾ ಆಗುತ್ತಿರುವಾಗ, ಅದನ್ನು ಬೇಕಾದವರಿಗೆ ಮುಟ್ಟಿಸುವ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಅದು ಮುಟ್ಟಿದರೂ ದುಬಾರಿ ಬೆಲೆಗೆ ಮಾರಾಟ ಆದರೂ ಅದರ ಲಾಭ ರೈತರಿಗಿಲ್ಲ. ಬದಲಾಗಿ ದಲ್ಲಾಳಿಗಳು, ಮಧ್ಯವರ್ತಿಗಳು ಅದರ ಲಾಭ ಪಡೆಯುತ್ತಾರೆ. ಅದನ್ನು ಕಷ್ಟಪಟ್ಟು ಬೆಳೆಸಿದ ರೈತರು ಇಲ್ಲಿ ಅದನ್ನು ಅತ್ಯಲ್ಪ ಬೆಲೆಗೆ ಮಾರುತ್ತಿದ್ದಾರೆ.

ಈ ದಾಳಿಂಬೆಯನ್ನು ಸಂಸ್ಕರಿಸಿ ಕಾದಿಡಬಹುದಾದ ವ್ಯವಸ್ಥೆಯನ್ನಾಗಲೀ, ರೈತರಿಗೆ ಮಾರುಕಟ್ಟೆ ಒದಗಿಸಿ ಉತ್ತಮ ಬೆಲೆ ಒದಗಿಸುವ ವ್ಯವಸ್ಥೆಯನ್ನಾಗಲೀ ಮಾಡುವುದು ಈ ರೈತರನ್ನು ತೋಟಗಾರರನ್ನು ಉಳಿಸುವ ಮಹಾನ್ ಪ್ರಯತ್ನವಾದೀತು. ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯ ಹಣ್ಣುಗಳು ಮತ್ತು ತರಕಾರಿಗಳನ್ನು ಬೆಳೆಯಲಾಗುತ್ತದೆ. ಆದರೆ ಇದನ್ನು ಬೆಳೆದ ರೈತರಿಗೆ ಸರಿಯಾದ ಬೆಲೆಯನ್ನು ಕೊಡಿಸುವ ವ್ಯವಸ್ಥೆ ಆಗಬೇಕಾಗಿದೆ. ಇವರ ಬೆಳೆಯ ಮೌಲ್ಯವರ್ಧನೆ ಆಗಬೇಕಾಗಿದೆ.

ತೋಟಗಾರಿಕೆ ಇಲಾಖೆ, ಕೃಷ್ಯುತ್ಪನ್ನ ಮಾರುಕಟ್ಟೆ ಸಮಿತಿ, ಸಹಕಾರಿ ಇಲಾಖೆ, ಕೃಷಿ ಇಲಾಖೆ, ಸ್ವಯಂ ಸೇವಾ ಸಂಸ್ಥೆಗಳು, ಸ್ವಸಹಾಯ ಸಂಘಗಳು ಇತ್ಯಾದಿಗಳ ಸಮನ್ವಯದಿಂದ ಇದು ಸಾಧ್ಯವಿದೆ. ಸಂಬಂಧಪಟ್ಟ ಅಧಿಕಾರಿಗಳು ಒಂದು ಸಮಗ್ರ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸಲು ಪ್ರಯತ್ನ ಮಾಡಬೇಕಾಗಿದೆ.

- ಎನ್. ಕೆ.

ಎಲ್ಲಕ್ಕಿಂತಲೂ ಉತ್ತಮ ಮಾತೆಂದರೆ ಕೃತಿ
- ಜೋಸ್ ಮಾರ್ತಿ, ಕ್ಯೂಬಾದ ಸ್ವಾತಂತ್ರ್ಯ ಪ್ರೇರಕ ಕವಿ.

ಮುನ್ನೋಟ

## ಆಡಳಿತ ತರಬೇತಿ ಸಂಸ್ಥೆ

(ಮಾರ್ಚ್, 2008 )

ಆರ್ಥಿಕ ವರ್ಷಾಂತ್ಯದ ಹಿನ್ನೆಲೆಯಲ್ಲಿ ಆಡಳಿತ ತರಬೇತಿ ಸಂಸ್ಥೆಯಲ್ಲಿ ಯಾವುದೇ ವಿಶೇಷ ತರಬೇತಿಯನ್ನು ಆಯೋಜಿಸಲಾಗಿಲ್ಲ.

**ರಾಜ್ಯ ನಗರಾಭಿವೃದ್ಧಿ ಸಂಸ್ಥೆ**

| | |
|---|---|
| ನಗರ ನಿರ್ವಹಣೆಯಲ್ಲಿ ಸರ್ಟಿಫಿಕೇಷನ್ ಕಾರ್ಯಕ್ರಮ | ಫೆಬ್ರುವರಿ 18- ಮಾರ್ಚ್ 01 |
| ನಗರ ಸ್ಥಳೀಯಾಡಳಿತ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಕಂಪ್ಯೂಟರ್ ತಿಳುವಳಿಕೆ ಕಾರ್ಯಕ್ರಮ | ಮಾರ್ಚ್ 02-04 |
| ಸಮಗ್ರ ವಸತಿ ಮತ್ತು ಸ್ಲಂ ಅಭಿವೃದ್ಧಿ/ ಸ್ಲಂಗಳ ಸುಧಾರಣೆ | ಮಾರ್ಚ್ 02-07 |
| ನಗರ ಸ್ಥಳೀಯಾಡಳಿತ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಕಂಪ್ಯೂಟರ್ ತಿಳುವಳಿಕೆ ಕಾರ್ಯಕ್ರಮ | ಮಾರ್ಚ್ 06-07 |
| ನಗರ ಸ್ಥಳೀಯಾಡಳಿತ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಕಂಪ್ಯೂಟರ್ ತಿಳುವಳಿಕೆ ಕಾರ್ಯಕ್ರಮ | ಮಾರ್ಚ್ 10-11 |
| ನಗರ ಸ್ಥಳೀಯಾಡಳಿತ ಸಂಸ್ಥೆಗಳ ಚುನಾಯಿತ ಅಧ್ಯಕ್ಷರಿಗೆ ಮುನಿಸಿಪಲ್ ಆಡಳಿತ ಮತ್ತು ಸುಧಾರಣೆ | ಮಾರ್ಚ್ 10-12 |
| ನಿಧಿ ಆಧರಿತ ಲೆಕ್ಕಪತ್ರ ವ್ಯವಸ್ಥೆ (ಎಫ್‌ಬಿಎಎಸ್) ಕುರಿತು ತರಬೇತಿ | ಮಾರ್ಚ್ 10-15 |
| ನಗರ ಸ್ಥಳೀಯಾಡಳಿತ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಕಂಪ್ಯೂಟರ್ ತಿಳುವಳಿಕೆ ಕಾರ್ಯಕ್ರಮ | ಮಾರ್ಚ್ 13-14 |
| ನಗರ ಸ್ಥಳೀಯಾಡಳಿತ ಸಂಸ್ಥೆಗಳ ಚುನಾಯಿತ ಅಧ್ಯಕ್ಷರಿಗೆ ಮುನಿಸಿಪಲ್ ಆಡಳಿತ ಮತ್ತು ಸುಧಾರಣೆ | ಮಾರ್ಚ್ 13-15 |

**ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ**

| | |
|---|---|
| ಗ್ರಾಮ ಪಂಚಾಯಿತಿ ಸದಸ್ಯರಿಗೆ ಉಪಗ್ರಹ ಆಧರಿತ ತರಬೇತಿ- IVನೇ ಸುತ್ತು- ಪ್ರಸಾರ 7 | ಫೆಬ್ರುವರಿ 28- ಮಾರ್ಚ್ 01. |
| 'ಗ್ರಾಮ ಸ್ವರಾಜ್'- ಜನಯೋಜನಾ ಅನುಸರಣಾ ಚಟುವಟಿಕೆಯ ಅವಲೋಕನ | ಮಾರ್ಚ್ 10-12 |
| ಗ್ರಾಮ ಪಂಚಾಯಿತಿ ಸದಸ್ಯರಿಗೆ ಉಪಗ್ರಹ ಆಧರಿತ ತರಬೇತಿ- IVನೇ ಸುತ್ತು ಪ್ರಸಾರ 8 | ಮಾರ್ಚ್ 10-12 |
| ಗ್ರಾಮ ಪಂಚಾಯಿತಿ ಸದಸ್ಯರಿಗೆ ಉಪಗ್ರಹ ಆಧರಿತ ತರಬೇತಿ- IVನೇ ಸುತ್ತು ಪ್ರಸಾರ 9 | ಮಾರ್ಚ್ 13-15 |
| ಗ್ರಾಮ ಪಂಚಾಯಿತಿ ಸದಸ್ಯರಿಗೆ ಉಪಗ್ರಹ ಆಧರಿತ ತರಬೇತಿ- IVನೇ ಸುತ್ತು ಪ್ರಸಾರ 4 | ಮಾರ್ಚ್ 17-19 |

# ವಿಕೇಂದ್ರೀಕರಣದ ಪರಿಣಾಮಕ್ಕೊಂದು ಜೀವಂತ ಉದಾಹರಣೆ

5 ನೇ ಪುಟದಿಂದ

ಶೌಚಾಲಯಗಳ ಬಳಕೆ ಕುರಿತು ಜನರಲ್ಲಿ ಹೆಚ್ಚಿನ ಆಸಕ್ತಿ ಮೂಡಿದೆ. ಅದೇ ರೀತಿ ಊರಿನ ಒಳಗಿರುವ ತಿಪ್ಪೆ ಗುಂಡಿಗಳನ್ನು ಹೊರಗೆ ಸ್ಥಳಾಂತರಿಸಲಾಗಿದೆ. ಊರಿನ ಬೀದಿಗೆ ಚಪ್ಪಡಿ ಮತ್ತು ಕಾಂಕ್ರೀಟ್ ಹಾಕಿರುವುದರಿಂದ ಊರು ಸ್ವಚ್ಛವಾಗಿದೆ. ನಾವು ಭೇಟಿ ನೀಡಿದ ದಿನ ಗ್ರಾಮ ಸಭೆ ಏರ್ಪಡಿಸಿದ ಜಾಗ ಎರಡು ವರ್ಷಗಳ ಹಿಂದೆ ಕೊಳಕು ತಿಪ್ಪೆಯಾಗಿತ್ತು. ಈಗ ಇಲ್ಲೇ ಗ್ರಾಮ ಸಭೆ ನಡೆಯುತ್ತಿದೆ. ಪ್ರತೀ ವರ್ಷ ಭಾದಿಸುತ್ತಿದ್ದ ಮಲೇರಿಯ, ಆಮಶಂಕೆಯಂತಹ ಕಾಯಿಲೆಗಳು ಈಗ ತುಂಬಾ ಕಡಿಮೆಯಾಗಿವೆ.

ಮೂರನೆಯದಾಗಿ ಇವರು ಶಾಲೆಯ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡಿದರು. ಎರಡು ವರ್ಷಗಳ ಹಿಂದೆ ಕೇವಲ ಐದನೇ ತರಗತಿ ಇತ್ತು. ಊರಿನ ಯಾವುದೇ ಹೆಣ್ಣು ಮಕ್ಕಳು ಐದನೇ ತರಗತಿಯ ನಂತರ ಶಾಲೆಗೆ ಹೋಗುತ್ತಿರಲಿಲ್ಲ. ಈಗ ಸರ್ಕಾರದ ಮೇಲೆ ಒತ್ತಡ ತಂದು ಎಂಟನೇ ತರಗತಿ ವರೆಗೆ ಮಾಡಿಸಿಕೊಂಡಿದ್ದಾರೆ. ಅವರ ಮುಂದಿನ ಗುರಿ ಪ್ರೌಢಶಾಲೆ. ಹೀಗೆಯೇ ರಸ್ತೆಗಾಗಿಯೂ ಅವರು ಹೋರಾಟ ನಡೆಸಿದ್ದಾರೆ. 12ನೇ ಹಣಕಾಸು ಆಯೋಗದ ಅನುದಾನದಲ್ಲಿ ಈ ವರ್ಷ ರಸ್ತೆಗೆ ಹಣ ಬಿಡುಗಡೆ ಮಾಡಲು ಜಿಲ್ಲಾ ಪಂಚಾಯಿತಿ ಒಪ್ಪಿಕೊಂಡಿದೆ. ಈ ಗ್ರಾಮದಲ್ಲಿ ಇರುವ 88 ಮನೆಗಳ ಪೈಕಿ 46 ಮನೆಗಳಲ್ಲಿ ಮಳೆ ನೀರನ್ನು ಸಂಗ್ರಹಿಸಿ ಮರುಪೂರಣ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಇದರಿಂದ ಇಲ್ಲಿನ ಅಂತರ್ಜಲ ಮಟ್ಟ 50-60 ಅಡಿಯಲ್ಲಿದೆ. ಗ್ರಾಮದಲ್ಲಿ ಅಲ್ಲಲ್ಲಿ ಗೋಡೆ ಫಲಕಗಳನ್ನು ಹಾಕಲಾಗಿದ್ದು, ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯಿತಿಯ ಎಲ್ಲಾ ನಿರ್ಣಯಗಳನ್ನು ಅದರಲ್ಲಿ ಬರೆಯಲಾಗುತ್ತಿದೆ. ಎಲ್ಲ ಆಗುಹೋಗುಗಳನ್ನು ಜನರೇ ಮೇಲ್ವಿಚಾರಣೆ ಮಾಡುವ ವ್ಯವಸ್ಥೆಗೆ ಜನರು ಮತ್ತು ಅಧಿಕಾರಿಗಳು ಹೊಂದಿಕೊಳ್ಳುತ್ತಿದ್ದಾರೆ.

ಜನರು ಮನಸ್ಸು ಮಾಡಿದರೆ, ಸರಕಾರಿ ಅಧಿಕಾರಿಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಬೆಂಬಲ ನೀಡಿದರೆ ಗ್ರಾಮಗಳ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬುದಕ್ಕೆ ಇದು ಉದಾಹರಣೆ. ಇದನ್ನು ನಾವೂ ಸಾಧಿಸಿ ತೋರಿಸಬಾರದೇಕೆ?



ಉದ್ಯಾನ ನಗರಿ ಎನಿಸಿರುವ ಮೈಸೂರಿನ ಈ ಬಾರಿಯ ದಸರಾ ಮಹೋತ್ಸವದ ಸ್ಪರ್ಧೆಗಳಲ್ಲಿ ಆಡಳಿತ ತರಬೇತಿ ಸಂಸ್ಥೆಯ ಉದ್ಯಾನವನ ಸತತ 11ನೇ ವರ್ಷದಲ್ಲಿ ಮೊದಲ ಬಹುಮಾನ ಗಳಿಸಿದೆ. ಚಿತ್ರದಲ್ಲಿ ಆಡಳಿತ ತರಬೇತಿ ಸಂಸ್ಥೆಯ ತೋಟಗಾರಿಕಾ ಅಧಿಕಾರಿ ಶ್ರೀ ಹೊಂಬೇಗೌಡ ಅವರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಲತಾ ಸಿದ್ದಶೆಟ್ಟಿ ಅವರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವುದನ್ನು ಕಾಣಬಹುದು.

-ವಿಲ್ಫ್ರೆಡ್ ಡಿಸೋಜ,
ಸಲಹೆಗಾರರು, ಅಬ್ದುಲ್ ನಜೀರ್ ಸಾಬ್
ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ.

# ಸುಸ್ಥಿರ ನಗರ ಜೀವನಾವಕಾಶ

## ದಕ್ಷಿಣ ಭಾರತ ಮಟ್ಟದ ಕಾರ್ಯಾಗಾರ

4ನೇ ಪುಟದಿಂದ

ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ಬೋಧಕರಾದ ಡಾ. ಕ್ರಿಸ್ತಿನಾ ಕಾಂತರಾಜ್‌ಅವರು ಅತಿಥಿಗಳನ್ನು ಪರಿಚಯಿಸಿದರು. ಇನ್ನೊಬ್ಬ ಬೋಧಕರಾದ ಶ್ರೀ ಬಿ. ಯೋಗನಾಥ್ ಸಿಂಗ್ ಅವರು ಧನ್ಯವಾದಗಳನ್ನು ಅರ್ಪಿಸಿದರು. ಡಾ. ಶಶಿಕಲಾ ಸೀತಾರಾಂ (ಮಾಯಾ) ಅವರು ಕಾರ್ಯಕ್ರಮ ನಿರ್ವಹಿಸಿದರು.

ನಂತರ ಸುಸ್ಥಿರವಾದ ಜೀವನಾವಕಾಶಕ್ಕೆ ಸಂಬಂಧಿಸಿ ಎರಡು ದಿನಗಳ ಕಾಲ ವಿವಿಧ ತಜ್ಞರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಮಹಾನಗರ ಪಾಲಿಕೆಯ ಕಮೀಷನರ್‌ಶ್ರೀ ಪಿ. ಮಣಿವಣ್ಣನ್‌ಅವರು ವಿಕೇಂದ್ರೀಕೃತ ನಗರಾಡಳಿತದ ಕುರಿತು ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಾ, ಉತ್ತಮ ಆಡಳಿತ ನೀಡಬೇಕಾದ ಅಗತ್ಯವನ್ನು ತಾನು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯ ಕಮೀಷನರ್ ಆಗಿದ್ದಾಗ ಪಡೆದ ಅನುಭವದ ಆಧಾರದಲ್ಲಿ ವಿವರಿಸಿದರು.

ಬೆಂಗಳೂರಿನ ಸಿಬಿಪಿಎಸ್‌ನ ಡಾ. ವಿನೋದ್ ವ್ಯಾಸುಲು ಅವರು ಮುನಿಸಿಪಲ್ ಹಣಕಾಸಿಗೆ ಸಂಬಂಧಿಸಿದಂತೆ ಕರ್ನಾಟಕದ ಅನುಭವಗಳನ್ನು ವಿವರಿಸಿದರು. ಬೆಂಗಳೂರಿನ ಲೈವ್ಲಿಹುಡ್ ಸ್ಕೂಲ್‌ನ ಬೋಧಕರಾದ ಶ್ರೀ ಧನಂಜಯ ಅವರು ಅಭಿವೃದ್ಧಿ ಅನುಸರಣಾ ಕ್ರಮಗಳನ್ನು ಜೀವನಾವಕಾಶದ ದೃಷ್ಟಿಕೋನದಿಂದ ವಿವರಿಸಿದರು.

ಕೇರಳದ ಕುಟುಂಬ ಶ್ರೀ ಕಾರ್ಯಕ್ರಮದ ನಗರ ಕಾರ್ಯಕ್ರಮಾಧಿಕಾರಿಯಾಗಿರುವ ಡಾ. ಕೃಷ್ಣಕುಮಾರ್ ಅವರು 'ಕುಟುಂಬ ಶ್ರೀ'ಯ ವಿವರಗಳನ್ನು ನೀಡಿ, ಅದು ಕೇರಳದಲ್ಲಿ ಬಡತನ ನಿವಾರಣೆಯಲ್ಲಿ ಹೇಗೆ ಕ್ರಾಂತಿಕಾರಕ ಪಾತ್ರವನ್ನು ವಹಿಸುತ್ತಿದೆ ಎಂದು ತಿಳಿಸಿದರು.

ಬೆಂಗಳೂರಿನ 'ಆವಾಸ್' ಸ್ವಯಂಸೇವಾ ಸಂಸ್ಥೆಯ ಶ್ರೀಮತಿ ಅನಿತಾ ರೆಡ್ಡಿಯವರು ನಗರಗಳ ವಸತಿ ಸಮಸ್ಯೆಗಳು ಮತ್ತು ಪರಿಹಾರಗಳ ಬಗ್ಗೆ ಬೆಳಕುಚೆಲ್ಲಿದರು. ಆಂಧ್ರ ಪ್ರದೇಶದ ಐಎಎಸ್ ಅಧಿಕಾರಿ ಶ್ರೀ ಜನಾರ್ದನ ರೆಡ್ಡಿಯವರು ಆಂಧ್ರಪ್ರದೇಶದ ನಗರ ಪುನರುತ್ಥಾನ ಯೋಜನೆಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು.



ಮಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿಪ್ರೊ. ಎಂ. ಐ. ಸವದತ್ತಿ ಅವರು ಸಮಾರೋಪ ಭಾಷಣ ಮಾಡುತ್ತಾ, ಹುಬ್ಬಳ್ಳಿ ಮತ್ತು ಧಾರವಾಡ ನಗರಪಾಲಿಕೆ ವ್ಯಾಪ್ತಿಯಲ್ಲಿ ವಿಭಾಗೀಯ ನಾಗರಿಕ ಸಮಿತಿಗಳ ಮೂಲಕ ಆಡಳಿತವನ್ನು ಚುರುಕುಗೊಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಯಿತು ಎಂಬುದನ್ನು ತಮ್ಮ ಅನುಭವದ ಆಧಾರದಲ್ಲಿ ವಿವರಿಸಿದರು. ಜನರ ಭಾಗವಹಿಸುವಿಕೆ ಇಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು.

ಪ್ರತಿಯೊಂದು ಅಧಿವೇಶನದ ಬಳಿಕ ಮುಕ್ತ ಚರ್ಚೆ ನಡೆಸಲಾಗಿತ್ತು. ಬೇರೆ ಬೇರೆ ರಾಜ್ಯಗಳಿಂದ ಪ್ರತಿನಿಧಿಗಳು ಪ್ರಶ್ನೆಗಳನ್ನು ಕೇಳಿ ಹಾಗೂ ಚರ್ಚೆ ನಡೆಸಿ ತಮ್ಮ ಅನುಮಾನಗಳನ್ನು ಪರಿಹರಿಸಿಕೊಂಡರು. ಬೇರೆ ಬೇರೆ ವಿಷಯಗಳ ಕುರಿತು ಮಂಡಿಸಲಾದ ವಿಚಾರಗಳನ್ನು 'ಪರಿವರ್ತನೆಗಾಗಿ ಪ್ರಶಿಕ್ಷಣ'ದಲ್ಲಿ ಕ್ರಮೇಣ ಪ್ರಕಟಿಸಲಾಗುವುದು. ಈ ಬಾರಿಯ ಸಂಚಿಕೆಯಲ್ಲಿ ಡಾ. ಕೃಷ್ಣಕುಮಾರ್ ಅವರು ಮಂಡಿಸಿದ 'ಕುಟುಂಬ ಶ್ರೀ' ಕುರಿತ ವಿವರಗಳ ಆಯ್ದ ಭಾಗಗಳನ್ನು ಪ್ರಕಟಿಸಲಾಗಿದೆ.

Parivarthanegaagi Prashikhana, Kannada monthly News Letter, Edited and Published by C.S. Suranjana, Director General, Administrative Training Institute, Mysore at ATI, Lalith Mahal road, Mysore and printed by him at Guptha Offset Printers, # 1033/A, S.J.H. Road, Vidyaranyapuram, Mysore. Ph. : 2482023
Reg. No. KAR/KAN/16172/10/1/2005-TC.

OIGS

Text printing in 90GSM Maplitho Paper &
Wrapper printing in 130 GSM Art Paper